ವಿಜಯಪುರ | ಸಂಪುಟ 04 | ಸಂಚಿಕೆ 185 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ


Editor: Indushekhar Manur

editor.udayarashmi@gmail.com RNI NO: KARKAN/2023/86203 ಮಂಗಳವಾರ, ಸೆಪ್ಟೆಂಬರ್, 15, 2026

"ಜಾರಿ ನಿರ್ದೇಶನಾಲಯ(ಇಡಿ)ದ ದಾಳಿಗೆ ಒಳಗಾಗಿರುವ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಶಾಪ ತಟ್ಟಿದೆ. ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಶಾಸಕರ ಸಹಿ ಮಾಡಿಸಿಕೊಟ್ಟವರೇ ಈ ಸತೀಶ್ ಜಾರಕಿಹೊಳಿ."



■ ಬಸನಗೌಡ ಪಾಟೀಲ ಯತ್ನಾಳ್
ವಿಜಯಪುರ ಶಾಸಕರು



## ನೀರಾವರಿ ಯೋಜನೆಯಿಂದ ರೈತರ ಜೀವನ ಮಟ್ಟ ಸುಧಾರಣೆ

■ ಉದಯರಶ್ಮಿ ದಿನಪತ್ರಿಕೆ

**ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ**

ವಿಜಯಪುರ: ಕಾತ್ರಾಳ ಗ್ರಾಮಸ್ಥರಿಗೆ ನೀರು ಸಿಕ್ಕ ಮೇಲೆ ಅವರ ಬದುಕೇ ಬದಲಾಗಿದೆ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ರವಿವಾರ ಬಬಲೇಶ್ವರ ತಾಲೂಕಿನ ಕಾತ್ರಾಳದಲ್ಲಿ ಶ್ರೀ ಸಿದ್ದೇಶ್ವರ ಜಾತ್ರೆ ಮತ್ತು ಮಂಗಲ ಭವನ ಉದ್ಘಾಟನೆ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನೀರಾವರಿ ಯೋಜನೆ ಸಾಕಾರಗೊಂಡಿದ್ದರಿಂದ ರೈತರ ಜೀವನ ಮಟ್ಟ ಸುಧಾರಿಸಿದ್ದು, ಈ ಭಾಗದ ರೈತರು ಈಗ 35 ಸಾವಿರ ಟನ್ ಕಬ್ಬು ಬೆಳೆಯುವಂತಾಗಿದೆ. ಸ್ಥಳೀಯ ಕೆರೆಗೆ ಸಂಪೂರ್ಣ ನೀರು ಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಗ್ರಾಮದ ಕಲ್ಯಾಣ ಮಂಟಪಕ್ಕೆ ಒಟ್ಟು ರೂ. 35 ಲಕ್ಷ ಅನುದಾನ ನೀಡಲಾಗಿದೆ. ಇಲ್ಲಿನ ಹೈಸ್ಕೂಲಿನ ಜಾಗದಲ್ಲಿ ಟೊಯೋಟಾ ಕಂಪನಿಯವರು ಸಿ.ಎಸ್.ಆರ್ ಅನುದಾನದಲ್ಲಿ ಸುಸಜ್ಜಿತ ಕೊಠಡಿಗಳನ್ನು ನಿರ್ಮಿಸಲಿದ್ದಾರೆ. ಅಲ್ಲದೇ, ಪ್ರಾಥಮಿಕ ಶಾಲೆಯ ಮಕ್ಕಳಿಗೆ ಆಟಿಕೆ ಸಲಕರಣೆಗಳನ್ನು ಕೂಡ ನೀಡಲಿದ್ದಾರೆ. ಗ್ರಾಮದ ರಸ್ತೆಯನ್ನು ಪ್ರಗತಿ ಪಥ ಯೋಜನೆಯಲ್ಲಿ ಸುಧಾರಿಸಲಾಗುವುದು. ಸರಕಾರಿ ಆಸ್ಪತ್ರೆ ಆರಂಭಿಸಲು ಕೇಂದ್ರ ಸರಕಾರದ ಮಾರ್ಗ ಸೂಚಿಯಂತೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು. ಈಗಾಗಲೇ ಕ್ಷೇತ್ರದಲ್ಲಿ ಸಾವಿರಾರು ದೇವಸ್ಥಾನಗಳಿಗೆ ಅನುದಾನ ನೀಡಲಾಗಿದೆ. ಮುಂದೆ ತಾವೆಲ್ಲ ಶಾಲೆ, ಕಾಲೇಜುಗಳ ಅಭಿವೃದ್ಧಿಗೆ ಬೇಡಿಕೆ ಇಟ್ಟರೆ ಮಕ್ಕಳ ಭವಿಷ್ಯ ಉಜ್ವಲವಾಗುತ್ತದೆ ಎಂದು ಸಚಿವರು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಅಪ್ಪುಗೌಡ ಪಾಟೀಲ, ಮಲ್ಲು ದಳವಾಯಿ, ವಿಠ್ಠಲ ಪಡಸಲಗಿ, ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಗಂಗಾಧರ ಸಂಬಣ್ಣಿ, ಕಲ್ಲಪ್ಪಗೌಡ ಬಿರಾದಾರ, ರಾಮಲಿಂಗ ಕೊಕಟನೂರ, ಗುರುಬಸಪ್ಪ ತೆವರಟ್ಟಿ, ಸಂಗು ಮನಗೂಳಿ ಮುಂತಾದವರು ಉಪಸ್ಥಿತರಿದ್ದರು.

ಮಲ್ಲಿಕಾರ್ಜುನ ಒಡೆಯರ ಸ್ವಾಗತಿಸಿದರು. ಬಾಳೇಶ ಪಡಸಲಗಿ ಪ್ರಾಸ್ತಾವಿಕ ಮಾತನಾಡಿದರು.

## ದರ್ಗಾ ವಿಠ್ಠಲ ಮಂದಿರ ಬಳಿ ಪುರಿ ಜಗನ್ನಾಥ ದೇಗುಲ ಪ್ರತಿರೂಪ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಎಲ್ಲೆಡೆ ವೈಭವದ ಗಣೇಶೋತ್ಸವ ನಡೆಯುತ್ತಿದೆ, ಗಣೇಶನ ಉತ್ಸವ ಮೂರ್ತಿಗಳ ಮಂಟಪಗಳಿಗೆ ವೈವಿಧ್ಯಮಯ ಸ್ಪರ್ಶ ನೀಡಲಾಗಿದೆ. ಅದೇ ತೆರನಾಗಿ ವಿಜಯಪುರ ನಗರದ ದರ್ಗಾ ವಿಠ್ಠಲ ಮಂದಿರ ಬಳಿ ಶ್ರೀ ವಿಠ್ಠಲ ಗಜಾನನ ತರುಣ ಮಂಡಳಿ ಅವರು ಗಣೇಶನ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿದ್ದು, ಶ್ರೇಷ್ಠ ಧಾರ್ಮಿಕ ಹಾಗೂ ಶ್ರದ್ಧೆ ಕೇಂದ್ರವಾಗಿರುವ ಪುರಿ ಜಗನ್ನಾಥ ದೇವಾಲಯದ ಪ್ರತಿರೂಪವನ್ನು ಸಿದ್ಧಪಡಿಸಿದ್ದಾರೆ.

ಶಂಕರ ಪೂಜಾರಿ ಎಂಬ ಪ್ರತಿಭಾನ್ವಿತ ಕಲಾವಿದರು ಥರ್ಮಾಕೋಲ್ ಮೊದಲಾದ ಪರಿಕರ ರಚಿಸಿ ಈ ಪ್ರತಿಕೃತಿ ರಚಿಸಿದ್ದು, 12 ಅಡಿ ಅಗಲ ಹಾಗೂ 8 ಅಡಿ ಉದ್ದವಿದ್ದು ಗಮನ ಸೆಳೆಯುತ್ತಿದೆ.

ಥರ್ಮಾಕೋಲ್ ಮೊದಲಾದ ಪರಿಕರಗಳನ್ನು ಬಳಸಿ ಅನೇಕ ಪ್ರತಿರೂಪ ಸಿದ್ಧಪಡಿಸುವ ಕಲೆಯನ್ನು ಕರಗತ ಮಾಡಿಕೊಂಡಿರುವ ಶಂಕರ ಅವರು ಈ ಹಿಂದೆ ಅಯೋಧ್ಯೆಯ ರಾಮ ಮಂದಿರದ ಮಾದರಿಯನ್ನು ಥರ್ಮಾಕೋಲ್ ನಲ್ಲಿ ಸಿದ್ಧಪಡಿಸಿದ್ದರು. ಈ ಬಾರಿ ದರ್ಗಾ ಭಾಗದ ಭಕ್ತರ ಕೋರಿಕೆಯಂತೆ ಪುರಿ ಜಗನ್ನಾಥ್ ದೇವಾಲಯದ ಮಾದರಿ ರೂಪಿಸಿದ್ದಾರೆ.

ಆ ಮೂಲಕ ಮಂಟಪದಲ್ಲಿ

ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಕಳವಳ । ಸೆ.21 ರಿಂದ 23 ವರೆಗೆ ನಡೆವ ಶಾಸಕಾಂಗದ ವಿಶೇಷ ಅಧಿವೇಶನದಲ್ಲಿ ಚರ್ಚೆ

# ಭವಿಷ್ಯದಲ್ಲಿ ರಾಜ್ಯಕ್ಕೆ ತೀವ್ರ ಬರ, ನೀರು–ವಿದ್ಯುತ್ ಕೊರತೆ!

■ ಉದಯರಶ್ಮಿ ದಿನಪತ್ರಿಕೆ



ರಾಮನಗರ: ರಾಜ್ಯದಲ್ಲಿ ತೀವ್ರ ಬರಗಾಲದ ಪರಿಸ್ಥಿತಿ ಹಾಗೂ ಕುಡಿಯುವ ನೀರು ಮತ್ತು ವಿದ್ಯುತ್‌ಗೆ ಮುಂಬರುವ ದಿನಗಳಲ್ಲಿ ಉಂಟಾಗಬಹುದಾದ ಕೊರತೆಯ ಬಗ್ಗೆ ಕರ್ನಾಟಕದ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಸೋಮವಾರ ಕಳವಳ ವ್ಯಕ್ತಪಡಿಸಿದ್ದು, ಉಷ್ಣ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಮತ್ತು ರಾಷ್ಟ್ರೀಯ ಗ್ರಿಡ್ ಮೂಲಕ ಹೆಚ್ಚುವರಿ ವಿದ್ಯುತ್ ಪಡೆಯಲು ಸರ್ಕಾರವು ವಿವಿಧ ಮಾರ್ಗಗಳನ್ನು ಪರಿಶೀಲಿಸುತ್ತಿದೆ ಎಂದು ಅವರು ತಿಳಿಸಿದರು. ಕನಕಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ 100 ತಾಲೂಕುಗಳಲ್ಲಿ ಬರಗಾಲವನ್ನು ಘೋಷಿಸಲಾಗಿದೆ ಮತ್ತು ನಿಗದಿತ ಮಾನದಂಡಗಳ ಆಧಾರದ ಮೇಲೆ ಇತರ ಪ್ರದೇಶಗಳನ್ನು ಬರಪೀಡಿತ ಎಂದು ಘೋಷಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಹೇಳಿದರು.

'ಈ ವರ್ಷ ಅಂತರ್ಜಲ ಮಟ್ಟವು ತೀವ್ರವಾಗಿ ಕುಸಿದಿದೆ ಮತ್ತು ಬೆಳೆಗಳು ನಾಶವಾಗಿವೆ. ಅನೇಕ ಕಡೆಗಳಲ್ಲಿ ಬೆಳೆಗಳನ್ನು ಬೆಳೆಯಲು ಕೂಡ ಸಾಧ್ಯವಾಗಿಲ್ಲ. ಮುಂದಿನ ದಿನಗಳಲ್ಲಿ ಕುಡಿಯುವ ನೀರು ಮತ್ತು ವಿದ್ಯುತ್‌ಗೆ ತೀವ್ರ ಕೊರತೆ ಉಂಟಾಗುವ ಸಾಧ್ಯತೆಯಿದೆ ಎಂದು ಪರಿಸ್ಥಿತಿಯ ಸೂಚಿಸುತ್ತಿದೆ' ಎಂದು ಅವರು ಹೇಳಿದರು.

ಕಳೆದ ವಾರ ವಿದ್ಯುತ್ ಬೇಡಿಕೆಯು 19,000 ಮೆಗಾವ್ಯಾಟ್ (MW) ಗಡಿ ದಾಟಿದ್ದು, ಇದರಿಂದಾಗಿ ಸಂಜೆಯ ಗರಿಷ್ಠ ಬಳಕೆಯ ಅವಧಿಯಲ್ಲಿ ಪ್ರತಿ ಯೂನಿಟ್‌ಗೆ 11 ರಿಂದ 13 ರೂಪಾಯಿಗಳ ದರದಲ್ಲಿ ವಿದ್ಯುತ್ ಖರೀದಿಸಬೇಕಾದ ಅನಿವಾರ್ಯತೆ ಸರ್ಕಾರಕ್ಕೆ ಎದುರಾಯಿತು ಎಂದು ತಿಳಿಸಿದರು.

ಈ ವಿಷಯದ ಕುರಿತು ವಿಸ್ತೃತವಾಗಿ ಚರ್ಚಿಸಲು ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನೆರೆಯ ರಾಜ್ಯಗಳೊಂದಿಗೆ ಮಾತುಕತೆ ನಡೆಸಲು ನಾನು ನಮ್ಮ ಇಂಧನ ಸಚಿವ ಕೆಜೆ ಜಾರ್ಜ್ ಅವರಿಗೆ ಸೂಚಿಸಿದ್ದೇನೆ. ಹೂಡಿಕೆದಾರರಿಂದ ನೀರು, ವಿದ್ಯುತ್ ಮತ್ತು ಭೂಮಿಗೆ ಬೇಡಿಕೆ ಹೆಚ್ಚುತ್ತಿರುವುದನ್ನು ಕರ್ನಾಟಕವು ಕಾಣುತ್ತಿದೆ' ಎಂದು ಶಿವಕುಮಾರ್ ತಿಳಿಸಿದರು. ಬರಗಾಲದಿಂದ ಉಂಟಾದ ನಷ್ಟಗಳ ಕುರಿತು ಮಾತನಾಡಿದ ಶಿವಕುಮಾರ್, ಸೆಪ್ಟೆಂಬರ್ 21 ರಿಂದ 23 ರವರೆಗೆ ನಿಗದಿಯಾಗಿರುವ ಶಾಸಕಾಂಗದ ವಿಶೇಷ ಅಧಿವೇಶನದಲ್ಲಿ, ಬರಗಾಲದಿಂದ ರೈತರಿಗಾದ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸರ್ಕಾರ ಎರಡು ದಿನಗಳನ್ನು ಮೀಸಲಿಟ್ಟಿದೆ ಎಂದು ತಿಳಿಸಿದರು. 'ಈ ವಿಷಯದಲ್ಲಿ ನಾವು ಪಕ್ಷ ರಾಜಕೀಯವನ್ನು ಪರಿಗಣಿಸುವುದಿಲ್ಲ. ಎಲ್ಲಿ ಬರಗಾಲ ತೀವ್ರವಾಗಿದೆಯೋ ಮತ್ತು ನಿಗದಿತ ಮಾನದಂಡಗಳು ಪೂರೈಸಲ್ಪಡುತ್ತವೆಯೋ, ಅಂತಹ ಪ್ರದೇಶಗಳನ್ನು ಶೀಘ್ರದಲ್ಲೇ ಬರಪೀಡಿತ ಪ್ರದೇಶಗಳೆಂದು ಘೋಷಿಸುತ್ತೇವೆ' ಎಂದು ಅವರು ಹೇಳಿದರು.

### ಸೆ.18 ರಂದು ದ.ಕನ್ನಡ ಜಿಲ್ಲೆಯಲ್ಲಿ ಸಚಿವ ಸಂಪುಟ ಸಭೆ



ವಲಸೆ ತಡೆಗಟ್ಟುವ ಹಾಗೂ ಜನರ ಜೀವನಮಟ್ಟ ಸುಧಾರಿಸಲು ಆ ಪ್ರದೇಶದ ಸಂಪನ್ಮೂಲಗಳನ್ನು ಬಳಸಿಕೊಳ್ಳುವತ್ತ ಗಮನಹರಿಸಿ, ಸೆಪ್ಟೆಂಬರ್ 18 ರಂದು ಕರಾವಳಿ ಭಾಗದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಜ್ಯ ಸಚಿವ ಸಂಪುಟವು ತನ್ನ ಮೊದಲ ಸಭೆಯನ್ನು ನಡೆಸಲಿದೆ. ಅಂದು ನಾವು ಹಲವಾರು ಕಾರ್ಯಕ್ರಮಗಳು ಮತ್ತು ಹೊಸ ಉಪಕ್ರಮಗಳನ್ನು ಘೋಷಿಸಲಿದ್ದೇವೆ ಎಂದು ಮುಖ್ಯಮಂತ್ರಿ ತಿಳಿಸಿದರು.

# ಸಚಿವರ ಭರವಸೆ: ಹೋರಾಟ ತಾತ್ಕಾಲಿಕ ಹಿಂಪಡೆ

■ ಉದಯರಶ್ಮಿ ದಿನಪತ್ರಿಕೆ



■ ಸಂಪೂರ್ಣ ಜಿಲ್ಲೆ ಬರ ಘೋಷಣೆಗೆ ಆಗ್ರಹಿಸಿ ವಿಜಯಪುರದಲ್ಲಿ ನಡೆಯುತ್ತಿದ್ದ ಧರಣಿ ಸತ್ಯಾಗ್ರಹ । ರೈತ ಸಂಘದ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಹೇಳಿಕೆ

ವಿಜಯಪುರ: 2026–27 ನೇ ಸಾಲಿನಲ್ಲಿ ವಿಜಯಪುರ ಜಿಲ್ಲೆಯಲ್ಲಿ ಒಟ್ಟಾರೆಯಾಗಿ ಮಳೆ ಆಗದೇ ನಷ್ಟಗೊಂಡಿರುವ ರೈತರಿಗೆ ನ್ಯಾಯಯುತ ಪರಿಹಾರ ಸಿಗುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ನಗರದ ಅಂಬೇಡ್ಕರ ವೃತ್ತದಲ್ಲಿ ಕಳೆದ 13 ದಿನಗಳಿಂದ ನಡೆಯುತ್ತಿರುವ ಹೋರಾಟದ ವೇದಿಕೆಗೆ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿ ಮಹಾಂತೇಶ ಬಿರಾದಾರ ಅವರು ಧರಣಿ ನಿರತ ವೇದಿಕೆಯಲ್ಲಿ ರೈತರೊಂದಿಗೆ ಸುದೀರ್ಘ ಚರ್ಚೆ ನಡೆಸಿದರು.

ನಂತರ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಬಿ ಪಾಟೀಲರ ಜೊತೆ ದೂರವಾಣಿಯಲ್ಲಿ ರೈತ ಮುಖಂಡರೊಡನೆ ಮಾತನಾಡಿಸಿ, ಕಳೆದ ಕೆಲವು ದಿನಗಳಿಂದ ಈ ವೇದಿಕೆಯಲ್ಲಿ ರೈತರೊಂದಿಗೆ ಹೋರಾಟ ಮಾಡುತ್ತಿರುವುದು ನಮ್ಮ ಗಮನಕ್ಕೂ ಹಾಗೂ ಸರಕಾರದ ಗಮನಕ್ಕೂ ಇದೆ, ಜಿಲ್ಲೆಯ ವಿವಿಧ ತಾಲೂಕಿನ ಹಳ್ಳಿಗಳಲ್ಲಿ ರೈತರ ಜಮೀನುಗಳಿಗೆ ಜಿಲ್ಲಾಧಿಕಾರಿಗಳು ಇನ್ನಿತರ ಅಧಿಕಾರಿಗಳೊಡನೆ ವೀಕ್ಷಣೆ ಮಾಡಿದ್ದೇನೆ, ಮಳೆ ಆಗದೇ ರೈತರು ಸಾಕಷ್ಟು ನಷ್ಟ ಆಗಿರುವುದನ್ನು ಈಗಾಗಲೇ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು ಗಮನಕ್ಕೆ ತಂದಿದ್ದೇನೆ, ನಾನು ಮತ್ತು ನಮ್ಮ ಸರ್ಕಾರ ಯಾವಾಗಲೂ ರೈತರ ಪರ ಇದ್ದೇವೆ, ಜಿಲ್ಲೆಯ 13 ತಾಲೂಕುಗಳನ್ನು ಸಂಪೂರ್ಣ ಬರ ಎಂದು ಘೋಷಣೆ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ವ್ಯಕ್ತಪಡಿಸಿ ಹೋರಾಟ ಹಿಂಪಡೆಯಲು ವಿನಂತಿಸಿದರು.

ಈ ವೇಳೆ ರೈತ ಸಂಘದ ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅವರು ರೈತ ಸಂಘದ ಮುಖಂಡರೊಡನೆ ಮಾತನಾಡಿ, ಈ ಹೋರಾಟವನ್ನು ಉಸ್ತುವಾರಿ ಸಚಿವರ ಭರವಸೆಯ ಮೆರೆಗೆ ತಾತ್ಕಾಲಿಕವಾಗಿ ಹಿಂಪಡೆಯುತ್ತೇವೆ, ಒಂದು ವೇಳೆ ಮುಂದಿನ 10 ದಿನಗಳಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳನ್ನು ಸಂಪೂರ್ಣ ಬರ ಘೋಷಣೆ ಮಾಡಬೇಕು, ಇಲ್ಲದಿದ್ದಲ್ಲಿ ನಮ್ಮ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ಅವರು ಹೇಳಿರುವಂತೆ 25000 ರೈತರೊಂದಿಗೆ ಸೋಲ್ಲಾಪುರ–ಬೆಂಗಳೂರ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಹೋರಾಟ ಮಾಡಲಾಗುವುದು. ಆ ಸಂದರ್ಭದಲ್ಲಿ ತಾವೂ ಕೂಡಾ ನಮ್ಮ ಜೊತೆ ಹೋರಾಟದಲ್ಲಿ ಪಾಲ್ಗೊಳ್ಳಬೇಕು ಅಂದರು.

ಜಿಲ್ಲೆಯ ಎಲ್ಲಾ 13 ತಾಲೂಕುಗಳನ್ನು ಬರಗಾಲ ಘೋಷಣೆ ಮಾಡಬೇಕು, ಪ್ರತಿ ಎಕರೆಗೆ 50 ಸಾವಿರ ಪರಿಹಾರ ನೀಡಬೇಕು, ವಿಮೆ ತುಂಬಿದ ಎಲ್ಲಾ ರೈತರಿಗೆ 50 ಪ್ರತಿಶತ ಮಧ್ಯಂತರ ಪರಿಹಾರ ನೀಡಬೇಕು, ಜಿಲ್ಲೆಯ ಎಲ್ಲಾ ಹಳ್ಳಕೊಳ್ಳ ಕೆರೆ ಕಾಲುವೆಗಳನ್ನು ತುಂಬಿಸಬೇಕು, ಜಾನುವಾರುಗಳಿಗೆ ಮೇವಿನ ವ್ಯವಸ್ಥೆ ಕಲ್ಪಿಸಬೇಕು, ಜೊತೆಗೆ ನಿರುದ್ಯೋಗಿ ಕೃಷಿ ಕಾರ್ಮಿಕರಿಗೆ ವಿ.ಜಿ.ರಾಮಜೀ ಅಡಿಯಲ್ಲಿ 200 ದಿನಗಳ ಕೆಲಸ ನಿಡಬೇಕು ಎಂದು ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಹೇಳಿದರು.

ಈ ವೇಳೆ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮನಗೌಡ ಪಾಟೀಲ, ಜಿಲ್ಲಾ ಉಪಾಧ್ಯಕ್ಷ ಮಹದೇವ ಬನಸೋಡೆ, ಜಿಲ್ಲಾ ಉಪಾಧ್ಯಕ್ಷ ಸಂಗಪ್ಪ ಟಕ್ಕೆ, ಅಂಬರೇಶ ಭೈರಗೊಂಡ, ಲಾಯಪ್ಪ ಇಂಗಳೆ ಸೇರಿದಂತೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಂಗಾಧರ ಸಂಬಣ್ಣಿ, ಸೇರಿದಂತೆ ಉಪ ಪೋಲಿಸ ಅಧೀಕ್ಷಕರಾದ ನಾಗರಾಜ ಹಾಗೂ ಪೋಲಿಸ ಇಲಾಖೆಯ ನಗರ ಠಾಣೆಯ ಪಿ.ಎಸ್.ಐ ದೇವರಾಜ ಉಳ್ಳಾಗಡ್ಡಿ ಇತರರು ಇದ್ದರು

# ಮುದ್ದು ಮಕ್ಕಳ ಮುಗ್ದತೆಯ ಮಂಟಪದಲ್ಲಿ ಅರಳಿದ ಗಣಪ

■ ಉದಯರಶ್ಮಿ ದಿನಪತ್ರಿಕೆ

■ ವರದಿ: ಚೇತನ ಶಿವಶಿಂಪಿ



"ಇಂದಿನ ಮಕ್ಕಳು ಮೊಬೈಲ್, ಗೇಮ್ಸ್ ಅಂತ ಕಳೆದುಹೋಗಿರುವಾಗ, ನಮ್ಮ ಬಡಾವಣೆಯ ಮಕ್ಕಳೆಲ್ಲ ಒಟ್ಟಾಗಿ ಇಂಥದೊಂದು ಸುಂದರ ಕೆಲಸ ಮಾಡಿದ್ದು ನೋಡಿ ನಿಜಕ್ಕೂ ಕಣ್ಣು ತುಂಬಿ ಬಂತು. ಒಗ್ಗಟ್ಟು, ಸಹಬಾಳ್ವೆ ಮತ್ತು ಸಂಸ್ಕೃತಿಯನ್ನು ಅವರು ಯಾವ ಪಠ್ಯಪುಸ್ತಕಗಳ ಹಂಗಿಲ್ಲದೆ ತಾವೇ ಕಲಿತುಕೊಂಡಿದ್ದಾರೆ. ಮಕ್ಕಳ ಈ ನಿಸ್ವಾರ್ಥ ಆಚರಣೆ ದೊಡ್ಡವರಿಗೇ ಒಂದು ಮಾದರಿ."

■ ಬಿ.ವಾಯ್.ಮೇಟಿ ಬಡಾವಣೆಯ ನಿವಾಸಿ

**ಮುದ್ದೇಬಿಹಾಳದ ಚಿಣ್ಣರ ಲೋಕದಲ್ಲಿ ವಿಘ್ನನಿವಾರಕ । ಆಡಂಬರವಿಲ್ಲದ ಭಕ್ತಿಗೆ ಬೆರಗಾದ ಬಡಾವಣೆ**

ಮುದ್ದೇಬಿಹಾಳ: ದುಬಾರಿ ಬಜೆಟ್ ಇಲ್ಲ, ಕಿವಿಯೊಡೆಯುವ ಡಿಜೆ ಸೌಂಡ್ ಬಾಕ್ಸ್‌ಗಳಿಲ್ಲ, ರಾಜಕೀಯ ನಾಯಕರ ಬೃಹತ್ ಕಟೌಟ್‌ಗಳ ಅಬ್ಬರವೂ ಇಲ್ಲ. ಕೈಯಲ್ಲಿದ್ದ ಚಿಲ್ಲರೆ ಕಾಸು, ಬಣ್ಣದ ಕಾಗದಗಳು, ಹಳೆಯ ರಟ್ಟು ಮತ್ತು ಎದೆಯಾಳದ ಮುಗ್ಧ ಭಕ್ತಿಯನ್ನೇ ಬಂಡವಾಳವಾಗಿಸಿಕೊಂಡು ಪುಟ್ಟ ಮಕ್ಕಳು ಪ್ರತಿಷ್ಠಾಪಿಸಿರುವ ಗಣೇಶನ ಎದುರು ಇಡೀ ಬಡಾವಣೆಯೇ ಕೈಮುಗಿದು ನಿಂತಿತ್ತು. ಹಬ್ಬದ ಹೆಸರಿನಲ್ಲಿ ಕೋಟಿ ಕೋಟಿ ಹಣ ಹರಿಯುವ ಇಂದಿನ ದಿನಗಳಲ್ಲಿ, ಮಕ್ಕಳ ಈ ಪುಟ್ಟ ಗಣೇಶೋತ್ಸವ ಹಬ್ಬದ ಅಸಲಿ ಸಡಗರ ಮತ್ತು ಅರ್ಥವನ್ನು ಸದ್ದಿಲ್ಲದೆ ಸಾರಿದೆ ಪಟ್ಟಣದ ವಿದ್ಯಾನಗರದ ಹನುಮಾನ್ ದೇವಸ್ಥಾನದ ಬಳಿ ಪ್ರತಿಷ್ಠಾಪಿಸಲಾದ ಗಣಪ.

ತಿಂಡಿ ತಿನ್ನಲು ಅಪ್ಪ–ಅಮ್ಮ ಕೊಡುತ್ತಿದ್ದ ಐದು–ಹತ್ತು ರೂಪಾಯಿಗಳ ನಾಣ್ಯಗಳನ್ನು ತಿಂಗಳುಗಟ್ಟಲೆ ಮಣ್ಣಿನ ಹುಂಡಿಯಲ್ಲಿ ಕೂಡಿಟ್ಟಿದ್ದ ಪುಟಾಣಿ ಸೇನೆ, ಗಣೇಶ ಚತುರ್ಥಿ ಸಮೀಪಿಸುತ್ತಿದ್ದಂತೆ ಕಾರ್ಯಪ್ರವೃತ್ತವಾಗಿತ್ತು. ಶಾಲೆ ಮುಗಿದ ತಕ್ಷಣ ಆಟವಾಡುವುದನ್ನು ಬಿಟ್ಟು, ಗಣೇಶನನ್ನು ಪ್ರತಿಷ್ಠಾಪಿಸುವ ಸ್ಥಳವನ್ನು ಸ್ವಚ್ಛಗೊಳಿಸಿದ್ದೇ ಗೊಳಿಸಿದ್ದು. ಗಿಡ–ಗಂಟಿ, ಮುಳ್ಳು ಕಲ್ಲುಗಳು ಇವರಿಗೆ ಲೆಕ್ಕಕ್ಕಿಲ್ಲ. ಹಾಗೋ ಹೀಗೋ ಮಾಡಿ ಸ್ಥಳವನ್ನು ಸ್ವಚ್ಛಗೊಳಿಸಿ, ಹತ್ತಿರದಲ್ಲಿ ಮನೆ ಕಟ್ಟುತ್ತಿದ್ದವರ ಬಳಿ 4 ಬಂಬೂಗಳನ್ನೂ ತಂದೇ ಬಿಟ್ಟರು. ಹಳೆಯ ಸೀರೆ, ಮಾವಿನ ತಳಿರು ತೋರಣ ಮತ್ತು ರಟ್ಟಿನ ಪೆಟ್ಟಿಗೆಗಳಿಂದ ಸುಂದರವಾದ ಮಂಟಪ ಸಿದ್ಧಪಡಿಸಿದರು. ಅಲ್ಲಲ್ಲಿ ಮನೆಗಳಿಗೆ ತೆರಳಿ ಪಟ್ಟಿ ಎತ್ತಿ ಅದಕ್ಕೆ ತಮ್ಮ ಉಳಿತಾಯದ ಹಣವನ್ನು ಸೇರಿಸಿ ಗಣೇಶನನ್ನು ತಂದು ಪ್ರತಿಷ್ಠಾಪಿಸಿಯೇಬಿಟ್ಟರು ಚಿಣ್ಣರಾದ ಶ್ರೇಯಸ್, ಸಾನ್ವಿ, ಜ್ಯೋತಿ, ಸತ್ವಿಕ, ಆರುಶ್, ನಿತ್ಯಾ, ಆರಾಧ್ಯ, ಸನ್ನಿಧಿ, ತನ್ವಿಕಾ, ಐಶ್ವರ್ಯ, ಐಶಿರಿ, ವಿರೇಶ, ಪೃಥ್ವಿ, ಅಭಯ, ಚಿದಾನಂದ, ಶ್ರೀಕಾಂತ, ಅಜಿತಾ, ಸಮನ್ವಿ, ಸಾಹಿತ್ಯ.

ಇಲ್ಲಿ ಪೂಜೆಗೂ ಯಾವುದೇ ಕೃತಕತೆಯ ಸೋಂಕಿಲ್ಲ. ಅಡುಗೆಮನೆಯಿಂದ ಅಮ್ಮನಿಗೆ ಹೇಳಿ ತಂದ ಸಕ್ಕರೆ, ಪುಟಾಣಿ ಈ ಗಣಪನಿಗೆ ಪರಮ ತೃಪ್ತಿಯ ನೈವೇದ್ಯ. ಮತ್ತು ನೆರೆಹೊರೆಯ ಮನೆಗಳಿಂದ ಕಿತ್ತು ತಂದ ದಾಸವಾಳದ ಹೂವುಗಳೇ ಗಣಪನಿಗೆ ವಿಶೇಶ ಅಲಂಕಾರ. ಕೈಯಲ್ಲಿ ಪುಟ್ಟ ತಟ್ಟೆಯನ್ನ ಹಿಡಿದು, ತಪ್ಪು–ತಪ್ಪಾಗಿಯೇ ಗಂಟೆ ಬಾರಿಸುತ್ತಾ ಮುಗ್ಧ ಸ್ವರದಲ್ಲಿ ಗಣಪತಿ ಭಪ್ಪಾ ಮೋರಯ್ಯಾ..ಪುಂಡೆ ಪಲ್ಲೆ ಸೋರಯ್ಯಾ ಎಂದು ಜಯಘೋಷ ಹಾಕುತ್ತಾ ಹಿಡಿದ ಆರತಿಯ ದೃಶ್ಯ ನೋಡುಗರನ್ನು ಮಂತ್ರಮುಗ್ಧಗೊಳಿಸಿತ್ತು.

ದೊಡ್ಡ ದೊಡ್ಡ ಮಂಟಪಗಳ ಅಬ್ಬರದ ನಡುವೆ, ಮಕ್ಕಳ ಎಳೆಯ ಹೃದಯಗಳ ಮುಗ್ಧತೆಯೇ ದೇವರಿಗೆ ಅತ್ಯಂತ ಪ್ರಿಯವೆಂಬಂತೆ ಈ ಪುಟ್ಟ ವಿನಾಯಕ ಕಂಗೊಳಿಸುತ್ತಿದ್ದಾನೆ. ಮಕ್ಕಳ ಈ ಅಪೂರ್ವ ಪ್ರಯತ್ನವನ್ನು ಕಂಡು ಹಿರಿಯರು ಹೆಮ್ಮೆಯಿಂದ ಬೆನ್ನುತಟ್ಟುತ್ತಿದ್ದು, ಅಕ್ಕಪಕ್ಕದ ಮನೆಯವರು ಪ್ರೀತಿಯಿಂದ ಭಾಗಿಯಾಗಿ ನೈವೇದ್ಯ ಅರ್ಪಿಸಿ ಮಕ್ಕಳ ಉತ್ಸಾಹಕ್ಕೆ ಸಾಥ್ ನೀಡಿದ್ದಾರೆ. ಆಡಂಬರವಿಲ್ಲದ ಈ ಪುಟ್ಟ ಗಣೇಶ ಇಡೀ ಪರಿಸರಕ್ಕೆ ಶುದ್ಧ ಪ್ರೀತಿ, ಶಾಂತಿ ಮತ್ತು ಹಬ್ಬದ ನೈಜ ಆನಂದದ ಬೆಳಕನ್ನು ಚೆಲ್ಲಿದ್ದಾನೆ.

ಅಫಜಲಪುರದಲ್ಲಿ 1.50 ಕೋಟಿ ವೆಚ್ಚದ ಸಿರಿಧಾನ್ಯ ಸಂಸ್ಕರಣಾ ಘಟಕಕ್ಕೆ ಭೂಮಿಪೂಜೆ

# ಸಿರಿಧಾನ್ಯಗಳಿಗೆ ವಿಶ್ವ ಮಟ್ಟದಲ್ಲಿ ಭಾರಿ ಬೇಡಿಕೆ :ಶಾಸಕ ಪಾಟೀಲ

■ ಉದಯರಶ್ಮಿ ದಿನಪತ್ರಿಕೆ




ಅಫಜಲಪುರ: ಕೃಷಿ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸುವ ನಿಟ್ಟಿನಲ್ಲಿ, ಕರ್ನಾಟಕ ಸರ್ಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಏಏಖಔಃ), ಕಲಬುರಗಿ ಇವರ ಸಹಯೋಗದಲ್ಲಿ ಮಹತ್ವದ ಯೋಜನೆಗೆ ಚಾಲನೆ ದೊರೆತಿದೆ.

2024–25ನೇ ಸಾಲಿನ ಮ್ಯಾಕ್ರೋ ಅನುದಾನದಡಿ 1.50 ಕೋಟಿ ವೆಚ್ಚದಲ್ಲಿ ಅಫಜಲಪುರ ಮತಕ್ಷೇತ್ರದ ಗೊಬ್ಬುರ (ಬಿ) ಗ್ರಾಮದಲ್ಲಿ ನಿರ್ಮಾಣಗೊಳ್ಳಲಿರುವ 'ಸಿರಿಧಾನ್ಯ ಸಂಸ್ಕರಣಾ ಘಟಕ'ಕ್ಕೆ ಶಾಸಕ ಎಂ. ವೈ. ಪಾಟೀಲ ಅವರು ವಿಧ್ಯುಕ್ತವಾಗಿ ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಎಂ. ವೈ. ಪಾಟೀಲ ಅವರು, "ಸಿರಿಧಾನ್ಯಗಳಿಗೆ ಇಂದು ಜಾಗತಿಕ ಮಟ್ಟದಲ್ಲಿ ಭಾರಿ ಬೇಡಿಕೆಯಿದೆ. ಈ ಘಟಕವು ಸಿರಿಧಾನ್ಯಗಳ ಉತ್ಪಾದನೆ, ಸಂಸ್ಕರಣೆ ಮತ್ತು ಮೌಲ್ಯವರ್ಧನೆಗೆ ವೇದಿಕೆಯಾಗಲಿದೆ. ಇದು ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿ, ನೇರವಾಗಿ ರೈತರಿಗೆ ಉತ್ತಮ ಮಾರುಕಟ್ಟೆ ಮತ್ತು ತಮ್ಮ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ದೊರಕಿಸಿಕೊಡುವಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯು ರೈತರ ಆದಾಯವನ್ನು ದ್ವಿಗುಣಗೊಳಿಸುವ ಸರ್ಕಾರದ ಕನಸಿಗೆ ಪೂರಕವಾಗಿದೆ" ಎಂದು ವಿವರಿಸಿದರು.

ಈ ಸಂಸ್ಕರಣಾ ಘಟಕವು ಕೇವಲ ಕೃಷಿಗೆ ಸೀಮಿತವಾಗದೆ, ಸ್ಥಳೀಯ ಯುವಕ–ಯುವತಿಯರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲಿದೆ. ಗ್ರಾಮೀಣ ಭಾಗದಲ್ಲಿಯೇ ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸುವ ಮೂಲಕ ಜನರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಇದು ಸಹಕಾರಿಯಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ಆಳಂದ ಶಾಸಕ ಬಿ.ಆರ್. ಪಾಟೀಲ ಅವರು ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಮಾಜಿ ಜಿಪಂ ಹಾಗೂ ತಾಪಂ ಸದಸ್ಯರು, ಪಕ್ಷದ ಹಿರಿಯ ಮುಖಂಡರು, ಕೃಷಿ ಇಲಾಖೆಯ ಹಿರಿಯ ಅಧಿಕಾರಿಗಳು, ಗೊಬ್ಬುರ (ಬಿ) ಗ್ರಾಮದ ರೈತ ಬಾಂಧವರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

### ರೈತರಲ್ಲಿ ಹರ್ಷ

ಅಫಜಲಪುರ ಭಾಗದಲ್ಲಿ ಸಿರಿಧಾನ್ಯ ಬೆಳೆಯುವ ರೈತರಿಗೆ ಈ ಘಟಕವು ವರದಾನವಾಗಲಿದ್ದು, ದೀರ್ಘಕಾಲದ ಬೇಡಿಕೆಯೊಂದು ಈಡೇರಿದಂತಾಗಿದೆ. ಗೊಬ್ಬುರ (ಬಿ) ಗ್ರಾಮದಲ್ಲಿ ಈ ಘಟಕ ತಲೆ ಎತ್ತುತ್ತಿರುವುದರಿಂದ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳ ರೈತರಿಗೆ ಸಾಗಾಣಿಕೆ ವೆಚ್ಚ ಮತ್ತು ಸಮಯದ ಉಳಿತಾಯವಾಗಲಿದೆ ಎಂದು ಸ್ಥಳೀಯ ರೈತರು ಹರ್ಷ ವ್ಯಕ್ತಪಡಿಸಿದ್ದಾರೆ.

# ಬರಗಾಲ ಪೀಡಿತ ತಾಲ್ಲೂಕು ಘೋಷಣೆಗೆ ಪೂರಕ ದಾಖಲೆ ಒದಗಿಸಿ



■ ಉದಯರಶ್ಮಿ ದಿನಪತ್ರಿಕೆ

■ ಪ್ರಜಾ ಸೇವೆ ಆಂದೋಲನ ಸಭೆಯಲ್ಲಿ ಶಾಸಕ ರಾಜುಗೌಡ ಪಾಟೀಲ ಅಧಿಕಾರಿಗಳಿಗೆ ಸೂಚನೆ

ದೇವರಹಿಪ್ಪರಗಿ: ಬರಗಾಲ ಪೀಡಿತ ತಾಲ್ಲೂಕು ಘೋಷಣೆಗೆ ಪೂರಕವಾಗುವಂತ ಅಗತ್ಯ ದಾಖಲೆಗಳನ್ನು ಒದಗಿಸಲು ಕೃಷಿ ಇಲಾಖೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ರಾಜುಗೌಡ ಪಾಟೀಲ(ಕುದರಿ ಸಾಲವಾಡಗಿ) ಹೇಳಿದರು.

ತಾಲ್ಲೂಕಿನ ಸಾತಿಹಾಳ ಗ್ರಾಮದಲ್ಲಿ ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ವಿಜಯಪುರ, ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ ದೇವರ ಹಿಪ್ಪರಗಿ ಅಡಿಯಲ್ಲಿ ಜರುಗಿದ ಪ್ರಜಾ ಸೇವೆ ಆಂದೋಲನ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ನಮ್ಮ ತಾಲ್ಲೂಕು ಬರಗಾಲ ಪೀಡಿತ ತಾಲ್ಲೂಕು ಪಟ್ಟಿಯಿಂದ ಹೊರಗುಳಿದಿದ್ದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಈ ಕು-ರಿತು ಅಗತ್ಯ ಮಾಹಿತಿ ಸಂಗ್ರಹಿಸಬೇಕು ಎಂದರು.

ಸಭೆಯಲ್ಲಿ ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, ಹೆಸ್ಕಾಂ, ತಾಲ್ಲೂಕು ಪಂಚಾಯಿತಿ, ಗಾಮೀಣ ಕುಡಿಯುವ ನೀರು ಸರಬರಾಜು, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಅರಣ್ಯ, ಪಿಆರ್‌ಇಡಿ, ಕೆಬಿಜೆ ಎನ್‌ಎಲ್ ಇವರು ತಮ್ಮ ಇಲಾಖೆಯ ಯೋಜನೆಗಳ ಕುರಿತು ಮಾಹಿತಿ ನೀಡಿದರು. ನಂತರ ವಿವಿಧ ಇಲಾಖೆಯ ಕುಂದುಕೊರತೆಗಳ ಕುರಿತು ರೈತರು ಮತ್ತು ಸಾರ್ವಜನಿಕರು ಅಹವಾಲುಗಳನ್ನು ಸಲ್ಲಿಸಿದರು. ಒಟ್ಟು 57 ಅರ್ಜಿಗಳು ಸ್ವೀಕೃತವಾಗಿದ್ದು ಅವುಗಳಲ್ಲಿ 18 ಅರ್ಜಿಗಳನ್ನು ಸ್ಥಳದಲ್ಲಿಯೇ ಇತ್ಯಥ-ರ್ ಪಡಿಸಲಾಯಿತು. ಬಾಕಿ ಉಳಿದ 39 ಅರ್ಜಿಗಳನ್ನು ಆಯ್‌ಪಿಜಿಆರ್‌ಎಸ್ ಪೋರ್ಟಲ್ ನಲ್ಲಿ ದಾಖಲಿಸಿ ಮುಂದಿನ ಕ್ರಮಕ್ಕಾಗಿ ಸಂಬಂದಿಸಿದ ಇಲಾಖೆಗಳಿಗೆ ವರ್ಗಾಯಿಸಲಾಯಿತು. ತಹಶೀಲ್ದಾರ ನಿಂಗಪ್ಪ ಬಿರಾದಾರ, ತಾಲ್ಲೂಕು ಪಂಚಾಯಿತಿ ಇಓ ಭಾರತಿ ಚೆಲುವಯ್ಯ , ಬಸವನ ಬಾಗೇವಾಡಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಿಲ್ಪಾ ಹಿರೇಮಠ, ಗ್ರೇಡ್-2 ತಹಶೀಲ್ದಾರ್ ಎಮ್.ಜಿ. ಬಿರಾದಾರ, ಗ್ರಾಮೀಣ ನೀರು ಪೂರೈಕೆ ಎಇಇ ವರ್ಧಮಾನ ಗುಂದಗಿ, ಪಿಆರ್‌ಇಡಿ ಎಇಇವಿ.ಎ.ರಾಠೋಡ, ಶಿರಸ್ತೇದಾರ ಸುರೇಶ ಮ್ಯಾಗೇರಿ ಇದ್ದರು.

### ಕೆ.ಆರ್.ಎಸ್ ಪಕ್ಷದ ಸೈನಿಕರಿಗೆ ನಾಯಕತ್ವ ತರಬೇತಿ ಶಿಬಿರದಲ್ಲಿ ರಾಜ್ಯ ಗೌರವಾಧ್ಯಕ್ಷ ರವಿಕೃಷ್ಣ ರೆಡ್ಡಿ ಕರೆ

# ನಾವೇ ಬದಲಾವಣೆಯ ಭಾಗವಾಗಬೇಕು

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದಲ್ಲಿ ಕರ್ನಾಟಕ ರಾಷ್ಟ್ರ ಸಮಿತಿ (ಏಖಖ) ಪಕ್ಷದ ಸೈನಿಕರಿಗೆ ರಾಜ್ಯ ಗೌರವಾಧ್ಯಕ್ಷ ರವಿಕೃಷ್ಣ ರೆಡ್ಡಿ ಅವರ ನೇತೃತ್ವದಲ್ಲಿ ನಾಯಕತ್ವ ತರಬೇತಿ ಕಾರ್ಯಾಗಾರ ಯಶಸ್ವಿಯಾಗಿ ನಡೆಯಿತು.

ಕಾರ್ಯಾಗಾರದಲ್ಲಿ ಮಾತನಾಡಿದ ರವಿಕೃಷ್ಣ ರೆಡ್ಡಿ ಅವರು, ರಾಜಕೀಯವನ್ನು ಕೇವಲ ಅಧಿಕಾರ ಮತ್ತು ಚುನಾವಣೆಗಳ ದೃಷ್ಟಿಯಿಂದ ನೋಡದೆ, ಜನರ ಸಮಸ್ಯೆಗಳಿಗೆ ಸ್ಪಂದಿಸುವ, ಭ್ರಷ್ಟಾಚಾರದ ವಿರುದ್ಧ ನಿರಂತರವಾಗಿ ಹೋರಾಡುವ ಹಾಗೂ ಪ್ರಾಮಾಣಿಕ ಆಡಳಿತಕ್ಕಾಗಿ ಶ್ರಮಿಸುವ ಜನಸೇವೆಯ ಕ್ಷೇತ್ರವನ್ನಾಗಿ ರೂಪಿಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಕೆಆರೆಸ್ ಪಕ್ಷವು ಕಳೆದ ವರ್ಷಗಳಲ್ಲಿ ನಡೆಸಿಕೊಂಡು ಬಂದಿರುವ ಲಂಚಮುಕ್ತ ಅಭಿಯಾನ, ಸೈಕಲ್ ಯಾತ್ರೆ, 'ಎದ್ದೇಳಿ ಕನ್ನಡಿಗ' ಅಭಿಯಾನ, ರೈತ ಜಾಗೃತಿ ಅಭಿಯಾನ ಹಾಗೂ ಪಕ್ಷದ ಸೈನಿಕರಿಗಾಗಿ ವ್ಯಕ್ತಿತ್ವ ಮತ್ತು ನಾಯಕತ್ವ ಕಾರ್ಯಾಗಾರಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ ಎಂದರು.

ಈ ನಾಯಕತ್ವ ತರಬೇತಿ ಕಾರ್ಯಾಗಾರದಲ್ಲಿ ಪಕ್ಷದ ಸೈನಿಕರಿಗೆ ಸಂಘಟನೆ ಕಟ್ಟುವುದು, ಜನರ ಸಮಸ್ಯೆಗಳನ್ನು ಗುರುತಿಸಿ ಅವುಗಳ ಪರಿಹಾರಕ್ಕಾಗಿ ಕಾನೂನುಬದ್ಧವಾಗಿ ಹೋರಾಟ ನಡೆಸುವುದು, ಸಾರ್ವಜನಿಕ ಜೀವನದಲ್ಲಿ ಶಿಸ್ತು ಮತ್ತು ಪ್ರಾಮಾಣಿಕತೆ ಕಾಪಾಡಿಕೊಳ್ಳುವುದು ಹಾಗೂ ಭ್ರಷ್ಟಾಚಾರದ ವಿರುದ್ಧ ಧೈರ್ಯವಾಗಿ ಧ್ವನಿ ಎತ್ತುವುದು ಸೇರಿದಂತೆ ವಿವಿಧ ವಿಷಯಗಳ ಕುರಿತು ಮಾರ್ಗದರ್ಶನ ನೀಡಲಾಯಿತು.

"ನಾವು ಬದಲಾವಣೆಯನ್ನು ಬಯಸುವುದಷ್ಟೇ ಅಲ್ಲ; ನಾವೇ ಬದಲಾವಣೆಯ ಭಾಗವಾಗಬೇಕು. ಪ್ರತಿಯೊಬ್ಬ ಏಖಖ ಸೈನಿಕನೂ ತನ್ನ ಕ್ಷೇತ್ರದಲ್ಲಿ ಪ್ರಾಮಾಣಿಕ ನಾಯಕತ್ವದ ಮಾದರಿಯಾಗಬೇಕು" ಎಂಬ ಸಂದೇಶವನ್ನು ಕಾರ್ಯಾಗಾರದಲ್ಲಿ ನೀಡಲಾಯಿತು.

ವಿಜಯಪುರ ಜಿಲ್ಲೆ ಸೇರಿಸಿದಂತೆ ವಿವಿಧ ಜಿಲ್ಲೆ ಮತ್ತು ತಾಲೂಕುಗಳಿಂದ ಆಗಮಿಸಿದ್ದ ಪಕ್ಷದ ಮುಖಂಡರು, ಪದಾಧಿಕಾರಿಗಳು ಹಾಗೂ ಸೈನಿಕರು ಕಾರ್ಯಾಗಾರದಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಕಾರ್ಯಾಗಾರವು ಕಾರ್ಯಕರ್ತರಲ್ಲಿ ಹೊಸ ಉತ್ಸಾಹ, ಆತ್ಮವಿಶ್ವಾಸ ಹಾಗೂ ಜನಪರ ಹೋರಾಟಗಳನ್ನು ಮತ್ತಷ್ಟು ಪರಿಣಾಮಕಾ-ರಿಯಾಗಿ ಮುನ್ನಡೆಸುವ ಸಂಕಲ್ಪ ಮೂಡಿಸಿತು.

ವಿಜಯಕುಮಾರ ಯು ಬಿ. ಶಿವಾನಂದ ಯಡಹಳ್ಳಿ, ಗಣಪತಿ ರಾಠೋಡ, ದೀಪಾ ಮರನೂರ, ಅಶೋಕ ಜಾಧವ, ಸಂತೋಷ ಹೂಗಾರ, ಶಕ್ತಿಕುಮಾರ, ಹಮಿದ ಇನಾಮದಾರ, ರಾಕೇಶ ಇಂಗಳಗಿ, ದುರ್ಗಪ್ಪ ಬೂದಿಹಾಳ, ಸೀನು ಹಿಪ್ಪರಗಿ, ವಿಕ್ರಮ್ ವಾಘಮೋರೆ, ನಬಿ ಹುಣಶ್ಯಾಳ, ಚಂದ್ರು ನಗಾರೇ ಸೇರಿದಂತೆ ಹಲವರಿದ್ದರು.

# ದೆಹಲಿಯಲ್ಲಿ ಅಮೆರಿಕದ ಶತ್ರುಗಳು!; ಪಶ್ಚಿಮದ ಲೆಕ್ಕಾಚಾರ ಕೆಡುತ್ತಿದೆಯೇ?

■ ಉದಯರಶ್ಮಿ ದಿನಪತ್ರಿಕೆ

ಚೀನಾ ಪ್ರಧಾನಿ ಕ್ಸಿ ಜಿನಪಿಂಗ್ ಅವರ ಭಾರತ ಭೇಟಿ ಕೇವಲ ಒಂದು ರಾಜತಾಂತ್ರಿಕ ಪ್ರವಾಸವಲ್ಲ. ಅದು ಜಾಗತಿಕ ಶಕ್ತಿ ಸಮತೋಲನ ಬದಲಾಗುತ್ತಿರುವುದರ ಸ್ಪಷ್ಟ ಸೂಚನೆ.

ಕ್ಸಿ ಜಿನಪಿಂಗ್ ಭಾರತಕ್ಕೆ ಬಂದಿಳಿದಿದ್ದಾರೆ. ಚೀನಾದ ಕಡೆಯಿಂದ ಭಾರತಕ್ಕೆ ದೊಡ್ಡ ಭರವಸೆಗಳು ಬಂದಿವೆ. ಭಾರತ ಮತ್ತು ಚೀನಾ ನಡುವಿನ ಸಂಬಂಧ ಮಧುರವಾಗಿರಬೇಕು, ಸ್ನೇಹಪರವಾಗಿರಬೇಕು ಎಂಬ ಮಾತುಗಳು ನಡೆಯುತ್ತಿವೆ. ಇಲ್ಲಿ ಗಮನಿಸಬೇಕಾದ ಸಂಗತಿ ಏನೆಂದರೆ ಭಾರತ ಮತ್ತು ಚೀನಾ ಒಟ್ಟಿಗೆ ಬಂದರೆ ಜಗತ್ತಿನ ಚಿತ್ರಣವೇ ಬದಲಾಗಬಹುದು. ಹೊಸ ಜಾಗತಿಕ ಕ್ರಮ ರೂಪುಗೊಳ್ಳುವಲ್ಲಿ ದೊಡ್ಡ ಅಡ್ಡಿ ಏನೆಂದು ಪಶ್ಚಿಮ ಜಗತ್ತಿಗೆ ಚೆನ್ನಾಗಿ ಗೊತ್ತು ಅದೇನೆಂದರೆ, ಭಾರತ ಮತ್ತು ಚೀನಾ ಒಂದೇ ಪುಟದಲ್ಲಿಲ್ಲ ಎಂಬುದು. ಆದರೆ ಇವೆರಡೂ ಒಟ್ಟಿಗೆ ಬಂದರೆ ವಿಷಯಗಳು ಬದಲಾಗುತ್ತವೆ.

ಬ್ರಿಕ್ಸ್ ಶೃಂಗಸಭೆಯ ಬಗ್ಗೆ ಮಾತನಾಡುವುದಾದರೆ, ಭಾರತ ಮಾಡಿರುವುದು ಖಂಡಿತವಾಗಿಯೂ ಪಶ್ಚಿಮ ಜಗತ್ತಿಗೆ ದೊಡ್ಡ ಆಘಾತವನ್ನು ನೀಡುತ್ತಿದೆ. ಕಾರಣವೇನೆಂದರೆ, ಅಮೆರಿಕದ ಶತ್ರುಗಳೆಲ್ಲರೂ ಇಲ್ಲಿ ಒಂದೇ ಮೇಜಿನ ಬಳಿ ಬಂದಿದ್ದಾರೆ. ಇರಾನ್ ಅಮೆರಿಕದ ಶತ್ರು ಅದರ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಭಾರತದಲ್ಲಿದ್ದಾರೆ. ಪ್ರಧಾನಿ ಮೋದಿ ಅವರ ಕೈ ಹಿಡಿದು ನಡೆಯುತ್ತಿದ್ದಾರೆ. ಅದೇ ರೀತಿ ವ್ಲಾಡಿಮಿರ್ ಪುಟಿನ್ ನಾಟೋ ರಷ್ಯಾ-ಯುಕ್ರೇನ್ ಯುದ್ಧದಲ್ಲಿ ಸಿಲುಕಿದ್ದಾರೆ; ಆ ಪುಟಿನ್ ಮೋದಿಯೊಂದಿಗೆ ಕುಳಿತಿದ್ದಾರೆ. ಚೀನಾ ಜೊತೆ ಅಮೆರಿಕ ವ್ಯಾಪಾರ ಯುದ್ಧದಲ್ಲಿ ಸಿಲುಕಿದೆ; ಆ ಕ್ಸಿ ಜಿನಪಿಂಗ್ ಭಾರತಕ್ಕೆ ಬಂದು ಬಿಟ್ಟಿದ್ದಾರೆ. ಸ್ಪಷ್ಟವಾಗಿ ಹೇಳುವುದಾದರೆ, ಅಮೆರಿಕದ ಶತ್ರುಗಳು ಒಟ್ಟಿಗೆ ಒಂದೇ ಮೇಜಿನ ಬಳಿ ಬಂದಿದ್ದಾರೆ.

ಇದರಲ್ಲಿ ಭಾರತದ ಬಗ್ಗೆ ಮಾತನಾಡುವುದಾದರೆ, ಅಮೆ-ರಿಕದೊಂದಿಗಿನ ಸಂಬಂಧ ಮೊದಲಿನಂತಿಲ್ಲ. ಅದು ಬದಲಾಗಿದೆ ಇದೇ ದೊಡ್ಡ ವ್ಯತ್ಯಾಸ. ಈ ಕಾರಣದಿಂದ ಪಶ್ಚಿಮ ಜಗತ್ತಿಗೆ ಈ ಸಮಯದಲ್ಲಿ ನಿದ್ರೆ ಹೋಗದ ರಾತ್ರಿಗಳಿರಬೇಕು. ಆದರೆ ಪಶ್ಚಿಮ



ಜಗತ್ತಿನ ಮಾಧ್ಯಮವನ್ನು ವಿಶ್ಲೇಷಿಸಿದರೆ, ಅಲ್ಲಿ ಒಂದು ಸಂಘಟಿತ ಪ್ರಚಾರ ನಡೆಯುತ್ತಿದೆ. ಬ್ರಿಕ್ಸ್ ಸತ್ತಿದೆ, ಅದರ ಗಾಳಿ ಹೊರಟು ಹೋಗಿದೆ ಎಂಬಂತಹ ಲೇಖನಗಳನ್ನು ಹೊರತರಲಾಗುತ್ತಿದೆ. ಟೈಮ್ ಪತ್ರಿಕೆ ಬರೆಯುತ್ತದೆ ವಿಭಜಿತ ಬ್ರಿಕ್ಸ್ ಅಮೆರಿಕಕ್ಕೆ ಸವಾಲಲ್ಲ. ವಾಷಿಂಗ್ಟನ್ ಟೈಮ್ಸ್ ಬರೆಯುತ್ತದೆ ಯುದ್ಧಗಳು ಮತ್ತು ಪ್ರತಿಸ್ಪರ್ಧೆಗಳಿಂದ ಬ್ರಿಕ್ಸ್ ಈಗಾಗಲೇ ಸೋತಿದೆ. ಕೀವ್ ಪೋಸ್ಟ್ ಬರೆಯುತ್ತದೆ ಪುಟಿನ್ಗೆ ಅವರು ಬಯಸಿದ್ದು ಸಿಗುವುದಿಲ್ಲ. ಹೀಗೆ ಬ್ರಿಕ್ಸ್ ವಿರುದ್ಧ ಪಶ್ಚಿಮ ಜಗತ್ತಿನಲ್ಲಿ ಸಂಘಟಿತ ಪ್ರಚಾರ ನಡೆಯುತ್ತಿದೆ. ತಾಂತ್ರಿಕವಾಗಿ ಇದು ಒಂದು ಕಥಿತ ಯುದ್ಧ. ಇದು ಏಕೆ ನಡೆಯುತ್ತಿದೆ ಎಂಬುದನ್ನು ತಿಳಿಯುವುದು ಬಹಳ ಅಗತ್ಯ. ಪ್ರಧಾನಿ ಮೋದಿ ಮತ್ತು ಇರಾನ್ ಅಧ್ಯಕ್ಷ ಪೆಜೆಶ್ಕಿಯಾನ್ ಜೊತೆಗಿನ ಭೇಟಿ ಮುಖ್ಯವಾದುದು. ಅಮೆರಿಕ ಇರಾನ್ ವಿರುದ್ಧ ಆರ್ಥಿಕ ದಿಗ್ಬಂಧನ ಪ್ರಚಾರ ನಡೆಸುತ್ತಿದೆ. ಆದರೆ ಇಲ್ಲಿ ಯಾವ ಆರ್ಥಿಕ ದಿಗ್ಬಂಧನ ನಡೆಯುತ್ತಿದೆ? ಬಲಿಷ್ಠ ಪೆಜೆಶ್ಕಿಯಾನ್ ಅವರನ್ನು ಸ್ವಾಗತಿಸಲು ಭಾರತದ ಕೇಂದ್ರ ಬಂದರು, ನೌಕಾಯಾನ ಮತ್ತು ಜಲಮಾರ್ಗಗಳ ರಾಜ್ಯ ಮಂತ್ರಿ ಅವರೇ ಹೋಗಿದ್ದಾರೆ. ಅದರ ಹಿಂದೆ ಚಾಬಹಾರ್ ಬಂದರು ಕುರಿತ ಮಾತುಕತೆ ನಡೆಯುತ್ತಿದೆ. ಇರಾನ್ ಈಗ ಯುದ್ಧಕ್ಕೂ ಮೊದಲಿನ ಶಕ್ತಿಯಲ್ಲ ಅದು ದೊಡ್ಡ ಶಕ್ತಿಯಾಗಿ ಹೊರಹೊಮ್ಮಿದೆ.

ಕ್ಸಿ ಜಿನಪಿಂಗ್ ಬರುವುದರೊಂದಿಗೆ ಎಲ್ಲವೂ ಬದಲಾಗುತ್ತಿದೆ. ನಿರಂತರವಾಗಿ ಸಂದೇಶಗಳು ಬರುತ್ತಿವೆ ನಾವು ನಮ್ಮ ಭಿನ್ನಾಭಿಪ್ರಾಯಗಳನ್ನು ಸರಿಯಾಗಿ ನಿಭಾಯಿಸುತ್ತೇವೆ, ಭಾರತದೊಂದಿಗಿನ ಸಂಬಂಧವನ್ನು ಮಧುರಗೊಳಿಸುತ್ತೇವೆ ಎಂದು. ಚೈನೀಸ್ ಏರ್ಲೈನ್ಸ್ ಭಾರತದೊಂದಿಗಿನ ಸಂಪರ್ಕವನ್ನು ಮತ್ತೆ ವೇಗವಾಗಿ ಮುಂದುವರಿಸುತ್ತಿದೆ. ಕಾರ್ಯತಂತ್ರಾತ್ಮಕ ಮತ್ತು ದೀರ್ಘಕಾಲೀನ ದೃಷ್ಟಿಕೋನದ ಭಾರತ-ಚೀನಾ ಸಂಬಂಧ ಕಟ್ಟುವ ಮಾತುಗಳು ಮುಂದುವರಿಯುತ್ತಿವೆ. ಬ್ರಿಕ್ಸ್ ಎಂಬ ಪದವನ್ನು ರೂಪಿಸಿದ ಜಿಮ್ ಒ'ನೀಲ್ ಅವರೇ ಹೇಳಿದ್ದಾರೆ ಭಾರತ ಮತ್ತು




ಲೇಖನ
– ಆಕಾಶ್ ರೋಡಗಿ. ಶಿವೂರ್
ಅಫ್ಜಲ್ಪುರ ತಾಲೂಕು
ಕಲಬುರ್ಗಿ ಜಿಲ್ಲೆ
ಮೊ: 9482455825

ಚೀನಾ ಒಟ್ಟಿಗೆ ಬಂದರೆ ಜಗತ್ತಿನ ಚಿತ್ರಣ ಬದಲಾಗುತ್ತದೆ ಎಂದು.

ಖಂಡಿತವಾಗಿಯೂ ಒಂದು ರೀಸೆಟ್ ನಡೆಯುತ್ತಿದೆ. ಚೀನಾದ ಸಾರ್ವಜನಿಕ ನಿರೂಪಣೆ ಮೃದುವಾಗಿದೆ, ಸ್ಥಿರವಾಗಿದೆ ಇದು ಬಹಳ ಅಸಾಮಾನ್ಯ. ಗಲ್ವಾನ್ ನಂತರ ಚೀನಾದ ಕಡೆಯಿಂದ ಇಂತಹ ಮಾತುಗಳನ್ನು ನಾವು ಕಂಡಿಲ್ಲ. ಸಂಬಂಧಗಳನ್ನು ಕಾರ್ಯತಂತ್ರಾತ್ಮಕ ಎತ್ತರ ಮತ್ತು ದೀರ್ಘಕಾಲೀನ ದೃಷ್ಟಿಕೋನದಿಂದ ನಡೆಸಬೇಕು, ಸಂವಹನ ವ್ಯವಸ್ಥೆ ಕಟ್ಟಬೇಕು, ಸಹಕಾರ ಮಾಡಬೇಕು, ಭಿನ್ನಾಭಿಪ್ರಾಯಗಳನ್ನು ಸರಿಯಾಗಿ ನಿಭಾಯಿಸಬೇಕು, ಒಳ್ಳೆಯ ನೆರೆಯವರಾಗಿ ಇರಬೇಕು ಎನ್ನುತ್ತಿದ್ದಾರೆ. ಈ ಭಾಷೆಯನ್ನು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೋ ನಿಂಗ್, ಭಾರತದಲ್ಲಿನ ಚೀನಾ ರಾಯಭಾರಿ ಶೂ ಫೈಹಾಂಗ್, ಬ್ರಿಕ್ಸ್ ಕವರ್ ಮಾಡುತ್ತಿರುವ ಚೀನೀ ಪತ್ರಕರ್ತೆಯರು ಎಲ್ಲರೂ ಒಂದೇ ರೀತಿ ಹೇಳುತ್ತಿದ್ದಾರೆ. ಚೀನಾದಲ್ಲಿ ಮಾಧ್ಯಮ ಸ್ವತಂತ್ರವಲ್ಲ; ಅಲ್ಲಿ ಮಾಧ್ಯಮ ಪ್ರತಿನಿಧಿಗಳನ್ನು ಎಚ್ಚರಿಕೆಯಿಂದ ಆಯ್ಕೆ ಮಾಡಿ ಸರ್ಕಾರ ಕಳುಹಿಸುತ್ತದೆ. ಅವರು ಹೇಳುವುದು ಚೀನಾ ತನ್ನ ಜನರಿಗೆ ತೋರಿಸಲು ಬಯಸುವ ನಿರೂಪಣೆಯೇ ಆಗಿರುತ್ತದೆ.

ಇಲ್ಲಿ ನೋಡಿದರೆ ಚೀನಾ-ಭಾರತ ನಡುವೆ ಸಂಭಂದ ಮರುಸ್ಥಾಪನೆ ಆರಂಭವಾಗಿದೆ. ಅಕ್ಟೋಬರ್ 2024ರಲ್ಲಿ ಗಡಿ ಗಸ್ತಿನ ಬಿರುಕು ಏರ್ಪಟ್ಟಿತು. ಜನವರಿ 2025ರಲ್ಲಿ ವಿಕ್ರಮ್ ಮಿಶ್ರಿ ಮತ್ತು ವಾಂಗ್ ಯಿ ಅವರ ಭೇಟಿ ಬೀಜಿಂಗ್ನಲ್ಲಿ ನಡೆದಿತ್ತು. 24 ಜುಲೈ 2025ರಂದು ಭಾರತ ಐದು ವರ್ಷಗಳ ನಿಲುಗಡೆಯ ನಂತರ ಚೀನೀ ಪ್ರಜೆಗಳಿಗೆ ಪ್ರವಾಸಿ ವೀಸಾ ನೀಡಿದೆ. ನಂತರ ವಾಂಗ್ ಯಿ ಭಾರತಕ್ಕೆ ಬಂದ ಮೇಲೆ ವೀಸಾ ಪ್ರಕ್ರಿಯೆ ಆರಂಭವಾಯಿತು, ನಿರಂತರವಾಗಿ ವಿಮಾನಗಳು ಆರಂಭವಾದವು ಏರ್ ಇಂಡಿಯಾ, ಇಂಡಿಗೋ, ಚೀನಾ ಈಸ್ಟರ್ನ್. ಇಂದು ಚೀನಾ ಸದರ್ನ್ ಕೂಡ 21 ಸೆಪ್ಟೆಂಬರ್ನಿಂದ ಭಾರತದೊಂದಿಗೆ ವಿಮಾನ ಸೇವೆ ನಡೆಸುತ್ತದೆ ಎಂದಿದೆ. ಕೈಲಾಸ ಮಾನಸರೋವರ ಯಾತ್ರೆ ಸಹ ಮುಂದುವರಿಯುತ್ತಿದೆ. ಹೀಗೆ ನಿರಂತರವಾಗಿ ಸಂಭಂದ ಮರುಸ್ಥಾಪನೆ ನಡೆಯುತ್ತಿದೆ.

ಇದರೊಂದಿಗೆ ಕೆಲವು ಮುಖ್ಯ ವಿಷಯಗಳೂ ನಡೆಯುತ್ತಿವೆ.




ನಿಯೋಗದಲ್ಲಿ ವಾಂಗ್ ಯಿ ಜೊತೆಗೆ ತೈಶಿ ಕೂಡ ಬರುತ್ತಿದ್ದಾರೆ ಇದು ದೊಡ್ಡ ವಿಷಯ. ತೈಶಿ ಅವರು ಶೀ ಜಿನಪಿಂಗ್ ಅವರ ವಾಸ್ತವಿಕ ಪ್ರಧಾನ ಕಾರ್ಯದರ್ಶಿ, ಗೇಟ್ಕೀಪರ್, ಮತ್ತು ಅತ್ಯಂತ ವಿಶ್ವಾಸಾರ್ಹ ವ್ಯಕ್ತಿ. ಮಾಧ್ಯಮದಲ್ಲಿ ಅವರನ್ನು ಎರಡನೇ ವ್ಯಕ್ತಿ ಎಂದು ಹೇಳುತ್ತಾರೆ; ಪ್ರೋಟೋಕಾಲ್ ಪ್ರಕಾರ ಅವರು ಐದನೇ ಶ್ರೇಣಿಯ ವ್ಯಕ್ತಿ. ಜಿನಪಿಂಗ್ ಅವರನ್ನು ಯಾರು ಭೇಟಿಯಾಗಬಹುದು, ಯಾರು ಮಾತನಾಡಬಹುದು ಎಲ್ಲವನ್ನೂ ಇವರೇ ನಿಯಂತ್ರಿಸುತ್ತಾರೆ. ಇಲ್ಲಿ ಅವರು ನೀಡುತ್ತಿರುವ ಸಂಕೇತವೇನೆಂದರೆ ವಾಂಗ್ ಯಿ ಚೀನಾ ಸರ್ಕಾರವನ್ನು ಪ್ರತಿನಿಧಿಸುತ್ತಾರೆ, ಆದರೆ ತೈಶಿ ಚೀನಾ ಕಮ್ಯುನಿಸ್ಟ್ ಪಕ್ಷವನ್ನು ಪ್ರತಿನಿಧಿಸುತ್ತಾರೆ. ಇಬ್ಬರೂ ಭಾರತಕ್ಕೆ ಬಂದಿರುವುದು ಚೀನಾ ಕೇವಲ ಸರ್ಕಾರದ ಮಟ್ಟದಲ್ಲಿ ಮಾತ್ರವಲ್ಲ, ರಾಜಕೀಯ ಪಕ್ಷದ ಮಟ್ಟದಲ್ಲೂ ಭಾರತದೊಂದಿಗೆ ತೊಡಗಿಸಿಕೊಳ್ಳುತ್ತಿದೆ ಎಂಬ ಸಂದೇಶ ನೀಡುತ್ತದೆ. ಚೀನಾದಲ್ಲಿ ಏಕಪಕ್ಷೀಯ ಆಡಳಿತವಿದೆ; ಚೀನಾ ಕಮ್ಯುನಿಸ್ಟ್ ಪಕ್ಷದೊಂದಿಗೆ ಭಾರತ ಸರ್ಕಾರದ ಸಂಬಂಧ ಬೆಳೆಯುತ್ತಿದ್ದರೆ, ಈ ಸಂಬಂಧ ದೀರ್ಘಕಾಲ ಉಳಿಯುತ್ತದೆ ಎಂದರ್ಥ. ನಿಮಗೆ ನೆನಪಿರಬಹುದು. ಉ20 ಭಾರತದಲ್ಲಿ ನಡೆದಾಗ ಕ್ಸಿ ಜಿನಪಿಂಗ್ ಬಂದಿರಲಿಲ್ಲ, ಲೀ ಚಿಯಾಂಗ್ ಅವರನ್ನು ಕಳುಹಿಸಿದ್ದರು. ಈ ಬಾರಿ ಅವರು ಒಬ್ಬರೇ ಬಂದಿಲ್ಲ, ಇಬ್ಬರನ್ನೂ ಕರೆತಂದಿದ್ದಾರೆ. ಇದು ಸ್ವತಃ ದೊಡ್ಡ ಸಂದೇಶ ಕ್ಸಿ ಜಿನಪಿಂಗ್ ಬಹಳ ಗಂಭೀರರಾಗಿದ್ದಾರೆ.

ನಮ್ಮ ನಡುವೆ ಘರ್ಷಣೆಗಳಿವೆ, ಸಾಕಷ್ಟು ಸಮಸ್ಯೆಗಳಿವೆ ಗಡಿ ಐಂಅ ಸಮಸ್ಯೆ, ವ್ಯಾಪಾರ ಕೊರತೆ, ಮಾರುಕಟ್ಟೆ ಪ್ರವೇಶ, ಹೂಡಿಕೆ, ವೀಸಾ ಸಮಸ್ಯೆಗಳು, ಚೀನಾ-ಪಾಕಿಸ್ತಾನ ಮಿಲಿಟರಿ ಸಂಬಂಧ, ಗಡಿಯಾಚೆಗಿನ ನದಿಗಳು, ಸೆಮಿಕಂಡಕ್ಟರ್, ನಿರ್ಣಾಯಕ ಪೂರೈಕೆ




ನಮ್ಮ ಮೇಲೆ ಅಮೆರಿಕ ಏನು ಮಾಡಿದೆ? ಭಾರತದ ಮೇಲೆ 50% ಸುಂಕ ವಿಧಿಸಿದೆ ನಾವು ರಷ್ಯನ್ ತೈಲ ಖರೀದಿಸುತ್ತೇವೆ ಎಂದು. ಈಗ ಈ ಶೃಂಗಸಭೆ ನಡೆಯುತ್ತಿರುವಾಗ ಯುಎಸ್ನಲ್ಲಿ 100% ಸುಂಕ ಮಸೂದೆ ಇದೆ; ರಷ್ಯಾ-ಚೀನಾ-ಇರಾನ್ ನಿರ್ಬಂಧ ಕಾಯ್ದೆ ಎಂಬ ಹೆಸರಿನಲ್ಲಿ ನಮ್ಮ ಮೇಲೆ ಸುಂಕ ವಿಧಿಸುತ್ತಿದ್ದಾರೆ.

ಇಲ್ಲಿ ಪಶ್ಚಿಮ ಮಾಧ್ಯಮ ಏನು ತೋರಿಸುತ್ತಿದೆ? ಬ್ರಿಕ್ಸ್ ಶೃಂಗಸಭೆ ಏನೂ ಅಲ್ಲ, ಅದು ಸತ್ತಿದೆ ಎಂದು ಹೇಳುತ್ತಿದೆ. ಆದರೆ ಪ್ರಶ್ನೆ ಏನೆಂದರೆ ಅದು ಸತ್ತಿದ್ದರೆ, ಒಂದು ವಾರ ಮೊದಲೇ ಸಂಘಟಿತವಾಗಿ ಬ್ರಿಕ್ಸ್ ಬಗ್ಗೆ ಇಷ್ಟು ಚರ್ಚೆ ಮಾಡುತ್ತಿರಲಿಲ್ಲ. ನ್ಯೂಯಾರ್ಕ್ ಟೈಮ್ಸ್, ಫಾ-ರಿನ್ ಅಫೇರ್ಸ್ ಎಲ್ಲವೂ ಸಂಘಟಿತವಾಗಿ; ಥಿಂಕ್ ಟ್ಯಾಂಕ್ಗಳು, ಬರಹಗಾರರು ಎಲ್ಲರೂ ಒಟ್ಟಿಗೆ ಬ್ರಿಕ್ಸ್ ಸತ್ತಿದೆ ಎಂದು ಹೇಳುತ್ತಿದ್ದಾರೆ. ಇದು ತೋರಿಸುತ್ತದೆ ಅದು ಎಷ್ಟು ಮಹತ್ವದ್ದು ಎಂಬುದನ್ನು. ಅವರು



ಸರಪಳಿ ಎಲ್ಲದರಲ್ಲೂ ಸಮಸ್ಯೆ ಇದೆ. ಇದರಲ್ಲಿ ಸಂಶಯವಿಲ್ಲ. ಆದರೆ ಇವು ಭಿನ್ನಾಭಿಪ್ರಾಯಗಳು; ಇವು ಯಾವಾಗಲೂ ಇರುತ್ತವೆ. ಇದು ನಮಗೂ ಗೊತ್ತು, ಅವರಿಗೂ ಗೊತ್ತು. ಆದ-ರೆ ಈ ಭಿನ್ನಾಭಿಪ್ರಾಯಗಳು ದ್ವೇಷವಾಗಿ ಬದಲಾಗದಂತೆ ಎರಡೂ ದೇಶಗಳು ಒಟ್ಟಿಗೆ ಕೆಲಸ ಮಾಡಬೇಕು. ಭಾರತ ಈಗ ಗಡಿಯಲ್ಲಿ ಮೂಲಸೌಕರ್ಯ ನಿರ್ಮಿಸುತ್ತಿದೆ, ಚೀನಾ ಕೂಡ ನಿರ್ಮಿಸುತ್ತಿದೆ. ಪಶ್ಚಿಮ ಮಾಧ್ಯಮ ಇದನ್ನೇ ಪ್ರಚಾರ ಮಾಡುತ್ತಿವೆ. ನೋಡಿ, ಜಿನಪಿಂಗ್ ಭಾರತಕ್ಕೆ ಬರುತ್ತಿದ್ದಾರೆ, ಆದರೆ ಗಡಿಯಲ್ಲಿ ಚೀನಾ ಮೂಲಸೌಕರ್ಯ ನಿರ್ಮಿಸುತ್ತಿದೆ ಎಂದು. ನಾವೂ ನಿರ್ಮಿಸುತ್ತಿದ್ದೇವೆ ಇಂದಿನಿಂದಲ್ಲ, ಕಳೆದ ಎಂಟು-ಒಂಬತ್ತು ವರ್ಷಗಳಿಂದ. ಅದು ನಿರ್ಮಾಣವಾಗುತ್ತದೆ ಇದು ಈ ಸಂಬಂಧದ ಒಂದು ಮುಖ. ಆದರೆ ಪಕ್ವತೆ ಎಂದರೆ ಆ ಭಿನ್ನಾಭಿಪ್ರಾಯಗಳನ್ನು ಉತ್ತಮವಾಗಿ ನಿಭಾಯಿಸುವುದು. ಈ ಸಮಸ್ಯೆಗಳು ಎಂದಿಗೂ ದ್ವೇಷವಾಗಿ ಬದಲಾಗಬಾರದು; ಶತ್ರುಗಳಾಗಬಾರದು ಸ್ಪರ್ಧಿಗಳಾಗಿರಬಹುದು. ಈ ಕಾರಣದಿಂದ ಪಶ್ಚಿಮಕ್ಕೆ ಇದು ದುಃಸ್ವಪ್ನ ಪರಿಸ್ಥಿತಿ. ಏಕೆಂದರೆ ಅವರ ಇಂಡೋ-ಪೆಸಿಫಿಕ್ ಕಾರ್ಯತಂತ್ರವೇ ಚೀನಾ ಮತ್ತು ಭಾರತ ಶತ್ರುಗಳಾಗಿ ಉಳಿಯಬೇಕು ಎಂಬುದನ್ನು ಅವಲಂಬಿಸಿದೆ. ಗಲ್ವಾನ್ ನಡೆದಾಗ ಪಶ್ಚಿಮ ಜಗತ್ತು ಅತ್ಯಂತ ಸಂತೋಷದಿಂದಿತ್ತು ಇನ್ನು ಭಾರತಕ್ಕೆ ಚೀನಾ ಶತ್ರು, ಚೀನಾಗೆ ಭಾರತ ಶತ್ರು, ಇನ್ನು ಭಾರತಕ್ಕೆ ಬೇರೆ ಆಯ್ಕೆ ಇಲ್ಲ, ಪಶ್ಚಿಮದೊಂದಿಗೇ ಜೊತೆಯಾಗಬೇಕು ಎಂದು. ಆದರೆ ಭಾರತ ಮತ್ತು ಚೀನಾ ಒಬ್ಬರನ್ನೊಬ್ಬರು ಶತ್ರುವಿನ ದೃಷ್ಟಿಯಿಂದ ನೋಡದೆ, ಸ್ಪರ್ಧಿಯ ದೃಷ್ಟಿಯಿಂದ ನೋಡಿದರೆ ಅದರಲ್ಲಿ ಸಾಕಷ್ಟು ಸಮಸ್ಯೆಗಳಿದ್ದು ಅವನ್ನು ಕಾಲಕ್ರಮೇಣ ಬಗೆಹರಿಸಬೇಕು ಆಗ ಪಶ್ಚಿಮದ ಇಡೀ ಲೆಕ್ಕಾಚಾರ ಕೆಡುತ್ತದೆ. ಏಕೆಂದರೆ ಭಾರತ ಪಕ್ಷ ಬದಲಾಯಿಸಿ ಪಶ್ಚಿಮದೊಂದಿಗೆ ನಿಲ್ಲುತ್ತಿಲ್ಲ, ಚೀನಾದೊಂದಿಗೂ ನಿಲ್ಲುತ್ತಿಲ್ಲ. ಬದಲಾಗಿ, ನಾವು ಚೀನಾದ ಎದುರು ಯುದ್ಧಕ್ಕೂ ಸಿದ್ಧರಿಲ್ಲ. ನಾವು ಹೋರಾಡಲು ಹೋಗುವುದಿಲ್ಲ ಯುಕ್ರೇನ್ನಂತೆ ನಾವು ಹೋರಾಡಲು ಹೋಗುವುದಿಲ್ಲ. ಇದೇ ಕಾರಣದಿಂದ ಪಶ್ಚಿಮದ ಲೆಕ್ಕಾಚಾರ ಕೆಡುತ್ತಿದೆ. ಇದು ನಮಗೂ ಮುಖ್ಯ, ಏಕೆಂದರೆ ಈ ರೀತಿಯಲ್ಲಿ ಪಶ್ಚಿಮ ನಮ್ಮನ್ನು ಆಪ್ತ ಎಂದು ತೆಗೆದುಕೊಳ್ಳುವುದಿಲ್ಲ.

ನಿಭಾಯಿಸಲು ಬಯಸುತ್ತಿರುವುದು ಗ್ರಹಿಕೆಯ ಅಪಾಯವನ್ನು. ಬ್ರಿಕ್ಸ್ ಕೊಠಡಿಯ ಬಗ್ಗೆ ಮಾತನಾಡುವುದಾದರೆ ಅದರಲ್ಲಿ ಚೀನಾ ಇದೆ, ರಷ್ಯಾ ಇದೆ, ಇರಾನ್ ಇದೆ, ಭಾರತ ಇದೆ, ಬ್ರೆಜಿಲ್ ಇದೆ, ದಕ್ಷಿಣ ಆಫ್ರಿಕಾ ಇದೆ, ಗಲ್ಫ್ ಹಣ ಇದೆ, ಆಫ್ರಿಕಾದ ಜನಸಂಖ್ಯೆ ಇದೆ, ಮತ್ತು ಮುಂದಿನ ದೊಡ್ಡ ಆರ್ಥಿಕತೆಯಾಗುವ ಇಂಡೋನೇಷ್ಯಾ ಇದೆ. ನಾವು ಇಂದು ಚೀನಾ 2008ರಲ್ಲಿ ಇದ್ದ ಸ್ಥಾನದಲ್ಲಿದ್ದೇವೆ ಎಂದು ಹೇಳುತ್ತೇವೆ; ಅದೇ ರೀತಿ ಇಂಡೋನೇಷ್ಯಾ ಕೂಡ ಆಗ ಭಾರತ ಇದ್ದ ಸ್ಥಾನದಲ್ಲಿದೆ. ಇವರೆಲ್ಲ ಒಟ್ಟಿಗೆ ಒಂದೇ ಮೇಜಿನ ಬಳಿ ಬಂದಾಗ ಯೋಚಿಸಿ ಜಗತ್ತಿನ ಅರ್ಧ ಜನಸಂಖ್ಯೆ, ಅರ್ಧ ತೈಲ, ಆರ್ಥಿಕತೆಯೂ ಸಹ; ಕ್ರಯಶಕ್ತಿ ಸಮಾನತೆಯ ಪ್ರಕಾರ ಜಿ7ಗಿಂತ ಬಹಳ ಹೆಚ್ಚು. ಇದು ಅಪಾರ ಹಣ, ಅಪಾರ ಸಂಪನ್ಮೂಲ, ಅಪಾರ ಮಾನವ ಸಂಪನ್ಮೂಲವಿರುವ ಕೊಠಡಿ. ಆದರೆ ಅದರಲ್ಲಿ ಯುಎಸ್ ಇಲ್ಲ, ಯುಕೆ ಇಲ್ಲ, ಯುರೋಪಿಯನ್ ಒಕ್ಕೂಟ ಇಲ್ಲ.

ಇಲ್ಲಿ ಪುಟಿನ್ ಬಂದು ಹೇಳುತ್ತಾರೆ ನೋಡಿ, ಈಗ ನಾವು ಜಿ7 ಅನ್ನು ಮೀರಿಸಿದ್ದೇವೆ; ಇನ್ನು ಮುಂದೆ ಹೋಗಬೇಕು ಎಂದು. ಇಲ್ಲಿ ಪುಟಿನ್ ಇದ್ದಾರೆ, ಶೀ ಇದ್ದಾರೆ, ಪೆಜೆಶ್ಕಿಯಾನ್ ಇದ್ದಾರೆ ಇವರೆಲ್ಲ ದೆಹಲಿಯಲ್ಲಿದ್ದಾರೆ. ಇದಕ್ಕಿಂತ ಭಯಾನಕ ಚಿತ್ರಣ ಪಶ್ಚಿಮಕ್ಕೆ ಬೇರೆ ಇರಲು ಸಾಧ್ಯವಿಲ್ಲ.

ಅದನ್ನು ಅವರು ಈಗ ತೋರಿಸುತ್ತಿಲ್ಲ ಸುಮ್ಮನಿದ್ದಾರೆ. ಆದರೆ ಒಂದೇ ಕೊಠಡಿಯಲ್ಲಿ ಅಮೆರಿಕದ ವಿರೋಧಿಗಳು ಒಟ್ಟುಗೂಡುತ್ತಿದ್ದಾರೆ; ಅದರಲ್ಲಿ ಕ್ಸಿ ಇದ್ದಾರೆ, ಪುಟಿನ್ ಇದ್ದಾರೆ, ಪೆಜೆಶ್ಕಿಯಾನ್ ಇದ್ದಾರೆ. ಅವರೆಲ್ಲ ಒಂದೇ ಮೇಜಿನ ಬಳಿ ಬಂದು, ಜೊತೆಗೆ ಭಾರತ ಇದ್ದರೆ ಅದು ಪಶ್ಚಿಮಕ್ಕೆ ಆತಂಕದ ಪರಿಸ್ಥಿತಿ. ಭಾರತ ಯುಎಸ್ನ ಹಿತದ ವಿರುದ್ಧ ಎಂದಿಗೂ ಹೋಗುವುದಿಲ್ಲ ಎಂಬ ಭರವಸೆ ಅವರಿಗಿತ್ತು. ಆದರೆ ಈಗ ಅದೇ ಮೇಜಿನ ಬಳಿ ಯುಎಸ್ನ ವಿರೋಧಿಗಳಿದ್ದಾರೆ; ಜೊತೆಗೆ ಭಾರತವೇ ಆತಿಥೇಯ ಅದೇ ಸಮಯದಲ್ಲಿ ಚೀನಾದೊಂದಿಗೆ ಸಂಬಂಧ ಮರುಸ್ಥಾಪನೆ ಮಾಡುತ್ತಿದೆ, ಇರಾನ್ನೊಂದಿಗೆ ಸಾಮೀಪ್ಯ ಹೆಚ್ಚಿಸುತ್ತಿದೆ. ಇದು ಅಮೆರಿಕಕ್ಕೆ ಆತಂಕದ ಕ್ಷಣ ಎಂದು ತೋ-ರಿಸುತ್ತದೆ; ಇದರಲ್ಲಿ ಎರಡು ಮಾತಿಲ್ಲ. ಮುಂದಿನ ದಿನಗಳಲ್ಲಿ ಈ ಬೆಳವಣಿಗೆಗಳು ಜಾಗತಿಕ ರಾಜಕೀಯದ ದಿಕ್ಕನ್ನು ನಿರ್ಧರಿಸಲಿವೆ.

# ನನ್ನ ತರಗತಿಯ ಕಣ್ಣಲ್ಲಿ ಗಣೇಶ; ಮೂರ್ತಿಯಲ್ಲ..

■ ಉದಯರಶ್ಮಿ ದಿನಪತ್ರಿಕೆ

**ಭಾವರಶ್ಮಿ**

ಮಹಾನ್ ಗುರು

ಗಣೇಶನನ್ನು ನಾನು ಪ್ರತಿವರ್ಷ ನೋಡುತ್ತೇನೆ. ಆದರೆ ನಾನು ಪ್ರಶಾಂತ ಕುಲಕರ್ಣಿ, ಒಬ್ಬ ಶಿಕ್ಷಕನಾಗಿ ಗಣೇಶನನ್ನು ನೋಡುವಾಗ, ನನಗೆ ಕಾಣಿಸುವ ಗಣೇಶನು ಕೇವಲ ಪೂಜಿಸುವ ದೇವನಾಗಿ ಕಾಣುವುದಿಲ್ಲ; ಮಕ್ಕಳನ್ನು ರೂಪಿಸುವ ಒಬ್ಬ ಮೌನ ಶಿಕ್ಷಕನಂತೆ ಕಾಣುತ್ತಾನೆ. ಹಲವು ವರ್ಷಗಳಿಂದ ತರಗತಿಯ ಮುಂದೆ ನಿಂತು ವಿದ್ಯಾರ್ಥಿಗಳ ಕುತೂಹಲ, ಭಯ, ಕನಸು, ಸೋಲು, ಗೆಲುವು ಮತ್ತು ಬದಲಾವಣೆಯನ್ನು ಕಂಡಿದ್ದೇನೆ. ಪ್ರತಿಯೊಂದು ಮಗುವೂ ಒಂದು ಪ್ರತ್ಯೇಕ ಜಗತ್ತು ಎಂಬ ಸತ್ಯವನ್ನು ಶಿಕ್ಷಕನಾಗಿ ಅರಿತುಕೊಂಡಿದ್ದೇನೆ. ಆದ್ದರಿಂದ ಗಣೇಶನ ಮೂರ್ತಿಯನ್ನು ನೋಡಿದಾಗ ಅದು ನನಗೆ ಕೇವಲ ಧಾರ್ಮಿಕ ಸಂಕೇತವಾಗಿ ಕಾಣುವುದಿಲ್ಲ; ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುವ ಒಂದು ಪಾಠಪುಸ್ತಕದಂತೆ ಕಾಣುತ್ತದೆ.

ತರಗತಿಯಲ್ಲಿ ನನ್ನ ಮುಂದೆ ಕುಳಿತಿರುವ ಮಕ್ಕಳು ಕೇವಲ ರೋಲ್ ನಂಬರ್‌ಗಳಲ್ಲ. ಒಬ್ಬನಿಗೆ ಗಣಿತ ಸುಲಭವಾಗಬಹುದು, ಮತ್ತೊಬ್ಬನಿಗೆ ಭಾಷೆ; ಒಬ್ಬನು ವೇಗವಾಗಿ ಕಲಿಯಬಹುದು, ಇನ್ನೊಬ್ಬನು ನಿಧಾನವಾಗಿ. ಒಬ್ಬನ ಪ್ರತಿಭೆ ಪುಸ್ತಕದಲ್ಲಿದ್ದರೆ, ಮತ್ತೊಬ್ಬನದು ಚಿತ್ರಕಲೆ, ಕ್ರೀಡೆ ಅಥವಾ ಸೃಜನಶೀಲತೆಯಲ್ಲಿರಬಹುದು. ಶಿಕ್ಷಕನಾಗಿ ನಾನು ಕಲಿತ ಮೊದಲ ಸತ್ಯ ಮಕ್ಕಳನ್ನು ಹೋಲಿಸುವುದಕ್ಕಿಂತ ಅವರೊಳಗಿನ ಸಾಮರ್ಥ್ಯವನ್ನು ಗುರುತಿಸುವುದು ಮುಖ್ಯ. ಗಣೇಶನ ಆನೆಯ ಮುಖ ನನಗೆ ಇದೇ ಪಾಠವನ್ನು ನೀಡುತ್ತದೆ. ಎಲ್ಲ ಮಕ್ಕಳನ್ನೂ ಒಂದೇ ಮಾದರಿಯಲ್ಲಿ ರೂಪಿಸುವುದಲ್ಲ ಶಿಕ್ಷಣ; ಪ್ರತಿಯೊಬ್ಬರೊಳಗಿನ ವಿಭಿನ್ನ ಶಕ್ತಿಯನ್ನು ಗುರುತಿಸಿ, ಅದಕ್ಕೆ ಸರಿಯಾದ ದಿಕ್ಕು ನೀಡುವುದೇ ಶಿಕ್ಷಣ.

ಗಣೇಶನ ದೊಡ್ಡ ತಲೆ ನನಗೆ ಜ್ಞಾನದ ನಿಜವಾದ ಅರ್ಥವನ್ನು ನೆನಪಿಸುತ್ತದೆ. ನಾವು ಮಕ್ಕಳಿಗೆ ಪಾಠ ಕಲಿಸುತ್ತೇವೆ, ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳುತ್ತೇವೆ, ಪರೀಕ್ಷೆಗೆ ಸಿದ್ಧಪಡಿಸುತ್ತೇವೆ. ಆದರೆ ಶಿಕ್ಷಣದ ಅಂತಿಮ ಗುರಿ ಉತ್ತರಗಳನ್ನು ನೆನಪಿಟ್ಟುಕೊಳ್ಳುವುದಲ್ಲ; ಸರಿಯಾದ ಪ್ರಶ್ನೆಯನ್ನು ಕೇಳುವ ಬುದ್ಧಿಯನ್ನು ಬೆಳೆಸುವುದು. ತರಗತಿಯಲ್ಲಿ ಒಬ್ಬ ವಿದ್ಯಾರ್ಥಿ “ಸರ್, ಹೀಗೆ ಯಾಕೆ?” ಎಂದು ಪ್ರಶ್ನಿಸಿದಾಗ, ಆ ಪ್ರಶ್ನೆಯ ಹಿಂದೆ ಜ್ಞಾನವನ್ನು ಹುಡುಕುವ ಮನಸ್ಸು ಕಾಣುತ್ತದೆ. ಆದ್ದರಿಂದ ನಾನು ಎಷ್ಟು ಪಾಠಗಳನ್ನು ಮುಗಿಸಿದೆ ಎಂಬುದಕ್ಕಿಂತ, ನನ್ನಿಂದ ಎಷ್ಟು ಮಕ್ಕಳಲ್ಲಿ ಚಿಂತನೆ ಹುಟ್ಟಿತು ಎಂಬುದೇ ನನ್ನ ಶಿಕ್ಷಕತ್ವದ ನಿಜವಾದ ಅಳತೆ. ಗಣೇಶನ ದೊಡ್ಡ ತಲೆ ಹೇಳುವ ಪಾಠಮಗುವಿನ ತಲೆಯನ್ನು ಮಾಹಿತಿಯಿಂದ ತುಂಬಬೇಡ; ಚಿಂತನೆಯಿಂದ ಬೆಳಗಿಸು.

ಅವನ ದೊಡ್ಡ ಕಿವಿಗಳು ಶಿಕ್ಷಕನಿಗೆ ಇನ್ನೂ ಆಳವಾದ ಪಾಠವನ್ನು ನೀಡುತ್ತವೆ. ಶಿಕ್ಷಕ ಎಂದರೆ ಮಾತನಾಡುವವನು ಮಾತ್ರವಲ್ಲ; ಮೊದಲು ಕೇಳುವವನು. ಕೆಲವೊಮ್ಮೆ ಪಾಠ ಕೇಳದಂತೆ ಕಾಣುವ



ಮಗುವಿನ ಮನಸ್ಸಿನಲ್ಲಿ ಬೇರೆ ಯಾವುದೋ ನೋವು ಇರಬಹುದು. ಕೆಲವೊಮ್ಮೆ ತಪ್ಪಾದ ಉತ್ತರದ ಹಿಂದೆ ಅಜ್ಞಾನವಲ್ಲ, ಆತ್ಮವಿಶ್ವಾಸದ ಕೊರತೆ ಇರಬಹುದು. ಪುಸ್ತಕದ ಪುಟ ಓದುವುದು ಸುಲಭ; ಮಗುವಿನ ಮನಸ್ಸನ್ನು ಓದುವುದು ಕಷ್ಟ. ಆದ್ದರಿಂದ ವಿದ್ಯಾರ್ಥಿಯ ಮಾತು ಮಾತ್ರವಲ್ಲ, ಅವನ ಮೌನವನ್ನೂ ಕೇಳುವ ಕಿವಿ ಶಿಕ್ಷಕನಿಗೆ ಬೇಕು. ಗಣೇಶನ ದೊಡ್ಡ ಕಿವಿಗಳು ನನಗೆ ಇದೇ ನೆನಪಿಸುತ್ತವೆ.


ಅವನ ಸಣ್ಣ ಕಣ್ಣುಗಳು ವಿದ್ಯಾರ್ಥಿಗಳ ಕನಸುಗಳನ್ನು ನೆನಪಿಸುತ್ತವೆ. ಎಲ್ಲ ಮಕ್ಕಳ ಗುರಿಯೂ ಒಂದೇ ಆಗಬೇಕಿಲ್ಲ. ಕೆಲವರಿಗೆ ವೈದ್ಯರಾಗುವ ಕನಸು, ಕೆಲವರಿಗೆ ಶಿಕ್ಷಕರಾಗುವ ಆಸೆ, ಮತ್ತೊಬ್ಬರಿಗೆ ಕೃಷಿ ಅಥವಾ ಉದ್ಯಮದ ಕನಸು. ಶಿಕ್ಷಕನ ಕೆಲಸ ಅವರ ಕನಸುಗಳನ್ನು ತನ್ನ ದೃಷ್ಟಿಗೆ ತಕ್ಕಂತೆ ಬದಲಿಸುವುದಲ್ಲ; ಅವರು ತಮ್ಮದೇ ದಾರಿಯನ್ನು ಸ್ಪಷ್ಟವಾಗಿ ಕಾಣುವಂತೆ ಮಾಡುವುದು. “ನೀನು ಮಾಡಬಲ್ಲೆ” ಎಂಬ ಶಿಕ್ಷಕನ ಒಂದು ಮಾತು ಕೆಲವೊಮ್ಮೆ ಮಗುವಿನ ಬದುಕಿನ ದಿಕ್ಕನ್ನೇ ಬದಲಿಸಬಲ್ಲದು. ಗಣೇಶನ ಸಣ್ಣ ಕಣ್ಣುಗಳು ಹೀಗಾಗಿ ಏಕಾಗ್ರತೆಯಷ್ಟೇ ಅಲ್ಲ, ಗುರಿಯತ್ತ ನೋಡುವ ದೃಷ್ಟಿಯನ್ನೂ ಕಲಿಸುತ್ತವೆ.

ಗಣೇಶನ ಸೊಂಡಿಲು ನನಗೆ ಶಿಕ್ಷಕನಾಗಿ ಬದಲಾಗುವ ಅಗತ್ಯವನ್ನು ನೆನಪಿಸುತ್ತದೆ. ಪ್ರತಿಯೊಂದು ಮಗುವಿಗೂ ಒಂದೇ ರೀತಿಯಲ್ಲಿ ಕಲಿಸಲು ಸಾಧ್ಯವಿಲ್ಲ. ಒಬ್ಬನಿಗೆ ಮಾತಿನಿಂದ ಅರ್ಥವಾಗಬಹುದು; ಇನ್ನೊಬ್ಬನಿಗೆ ಚಿತ್ರ ಬೇಕಾಗಬಹುದು; ಮತ್ತೊಬ್ಬನಿಗೆ ಉದಾಹರಣೆ ಅಥವಾ ಪುನರಾವರ್ತನೆ ಬೇಕಾಗಬಹುದು. ಹೀಗಾಗಿ ವಿದ್ಯಾರ್ಥಿ ಬದಲಾಗಬೇಕೆಂದು ಕಾಯುವುದಕ್ಕಿಂತ, ಶಿಕ್ಷಕನಾದ ನಾನು ನನ್ನ ಬೋಧನಾ ವಿಧಾನವನ್ನು ಬದಲಿಸಿಕೊಳ್ಳಬೇಕು. ಕಾಲ ಬದಲಾಗುತ್ತದೆ, ತಂತ್ರಜ್ಞಾನ ಬದಲಾಗುತ್ತದೆ, ಕಲಿಕೆಯ ವಿಧಾನಗಳು ಬದಲಾಗುತ್ತವೆ. ವಿಧಾನ ಬದಲಾಗಬಹುದು; ಆದರೆ ಶಿಕ್ಷಣದ ಮೌಲ್ಯಗಳು ಬದಲಾಗಬಾರದು. ಇದೇ ಸೊಂಡಿಲಿನ ಪಾಠ.

ಗಣೇಶನ ವಿಶಾಲ ಉದರವನ್ನು ನೋಡಿದಾಗ ಶಿಕ್ಷಕ ವೃತ್ತಿಯ ಮತ್ತೊಂದು ಸತ್ಯ ನೆನಪಾಗುತ್ತದೆ. ಪ್ರತಿದಿನ ತರಗತಿಯಲ್ಲಿ ಪ್ರಶಂಸೆ, ಟೀಕೆ, ನಿರೀಕ್ಷೆ, ಒತ್ತಡ ಹಲವು ಅನುಭವಗಳು ಎದುರಾಗುತ್ತವೆ. ಪ್ರತಿಯೊಂದನ್ನೂ ಹೃದಯಕ್ಕೆ ತೆಗೆದುಕೊಂಡರೆ ಶಿಕ್ಷಕ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತಾನೆ. ಕೆಲವು ವಿಷಯಗಳನ್ನು ಅರ್ಥಮಾಡಿಕೊಳ್ಳಬೇಕು, ಕೆಲವು ಕ್ಷಮಿಸಬೇಕು, ಕೆಲವು ಅಲ್ಲಿಯೇ ಬಿಟ್ಟು ಮುಂದುವರಿಯಬೇಕು. ಅನುಭವಗಳನ್ನು ಜೀರ್ಣಿಸಿಕೊಳ್ಳುವ ಮನೋವಿಶಾಲತೆಯೇ ಪರಿಪಕ್ವತೆ.

ಗಣೇಶನ ಕೈಯಲ್ಲಿರುವ ಪಾಶವನ್ನು ನಾನು ಶಿಕ್ಷಕನ ದೃಷ್ಟಿಯಿಂದ ನೋಡಿದಾಗ, ಅದು ಮಕ್ಕಳನ್ನು ಬಂಧಿಸುವ ಸಾಧನವಲ್ಲ; ಅವರ ಭಯದ ಬಂಧನವನ್ನು ಬಿಡಿಸುವ ಸಂಕೇತ. “ನನ್ನಿಂದ ಆಗುವುದಿಲ್ಲ”, “ನನಗೆ ಇದು ಬರುವುದಿಲ್ಲ”, “ನಾನು ಇತರರಷ್ಟು ಬುದ್ಧಿವಂತನಲ್ಲ” ಎಂಬ ಭಾವನೆಗಳು ಅನೇಕ ಮಕ್ಕಳೊಳಗೆ ಕಾಣದ ಪಾಶಗಳಂತೆ ಇರುತ್ತವೆ. ಶಿಕ್ಷಕನ ಒಂದು ಮಾತು, ಒಂದು ಪ್ರೋತ್ಸಾಹ, ಒಂದು ಅವಕಾಶ ಆ ಪಾಶವನ್ನು ಸಡಿಲಿಸಬಹುದು. ಮಗುವಿನೊಳಗೆ ಆತ್ಮವಿಶ್ವಾಸ ಮೂಡಿಸುವುದು ಕೂಡ ಶಿಕ್ಷಣದ ಒಂದು ದೊಡ್ಡ ಭಾಗ.

ಅಂಕುಶ ನನಗೆ ಶಿಸ್ತಿನ ಅರ್ಥವನ್ನು ತಿಳಿಸುತ್ತದೆ. ಆದರೆ ಶಿಸ್ತು ಎಂದರೆ ಭಯ ಹುಟ್ಟಿಸುವುದಲ್ಲ; ದಿಕ್ಕು ತೋರಿಸುವುದು. ಸಮಯಪಾಲನೆ, ಜವಾಬ್ದಾರಿ, ಪ್ರಾಮಾಣಿಕತೆ, ಪರಿಶ್ರಮ ಮತ್ತು ಇತರರನ್ನು ಗೌರವಿಸುವ ಗುಣಗಳು ಪರೀಕ್ಷೆಯ ಅಂಕಗಳಿಗಷ್ಟೇ ಬೇಕಾದವುಗಳಲ್ಲ; ಬದುಕಿನುದ್ದಕ್ಕೂ ಬೇಕಾದ ಮೌಲ್ಯಗಳು.




ಭಯದಿಂದ ಬಂದ ಶಿಸ್ತು ತಾತ್ಕಾಲಿಕ; ಅರಿವಿನಿಂದ ಬಂದ ಶಿಸ್ತು ಶಾಶ್ವತ.

ಪರಶು ನಮ್ಮೊಳಗಿನ ಅನಗತ್ಯವನ್ನು ಕತ್ತರಿಸುವ ಪಾಠ. “ಅಂಕ ಕಡಿಮೆ ಬಂದರೆ ನಾನು ಸೋತವನು”, “ನನ್ನ ಪರಿಸ್ಥಿತಿಯಿಂದ ನಾನು ಮುಂದೆ ಬರಲಾರೆ” ಎಂಬ ತಪ್ಪು ಕಲ್ಪನೆಗಳು ಮಕ್ಕಳ ಮನಸ್ಸಿನ ಕಾಣದ ಗೋಡೆಗಳು. ಅವುಗಳನ್ನು ಕತ್ತರಿಸಿ “ನಿನ್ನಿಂದ ಸಾಧ್ಯ” ಎಂಬ ಸಾಧ್ಯತೆಯ ಬಾಗಿಲು ತೆರೆಯುವುದು ಶಿಕ್ಷಕನ ಕರ್ತವ್ಯ.

ಮೋದಕ ನನಗೆ ಶಿಕ್ಷಕನ ನಿಜವಾದ ಬಹುಮಾನವನ್ನು ನೆನಪಿಸುತ್ತದೆ. ಅದು ಸಂಬಳವಲ್ಲ, ಪ್ರಶಸ್ತಿಯಲ್ಲ. ವರ್ಷಗಳ ಹಿಂದೆ ತನ್ನ ತರಗತಿಯಲ್ಲಿ ಕುಳಿತಿದ್ದ ವಿದ್ಯಾರ್ಥಿಯೊಬ್ಬ “ಸರ್, ನೀವು ಅಂದು ಹೇಳಿದ ಮಾತು ನನಗೆ ಇನ್ನೂ ನೆನಪಿದೆ” ಎಂದು ಹೇಳಿದಾಗ ಸಿಗುವ ಸಂತೋಷವೇ ಶಿಕ್ಷಕನ ಮೋದಕ. ವಿದ್ಯಾರ್ಥಿಯ ಯಶಸ್ಸಿನಲ್ಲಿ ತನ್ನ ಬೋಧನೆಯ ಒಂದು ಕಣವನ್ನು ಕಾಣುವುದು ಶಿಕ್ಷಕನ ಅತ್ಯಂತ ಸಿಹಿಯಾದ ಸಾಧನೆ.

ಕಮಲವನ್ನು ನೋಡಿದಾಗ ಪ್ರತಿಕೂಲ ಪರಿಸ್ಥಿತಿಯಲ್ಲೂ ಕನಸು ಕಾಣುವ ಮಕ್ಕಳ ನೆನಪಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಗೂ



ಒಂದೇ ರೀತಿಯ ಸೌಲಭ್ಯ ಇರುವುದಿಲ್ಲ. ಆದರೆ ಮನೆಯ ಪರಿಸ್ಥಿತಿ, ಬಡತನ ಅಥವಾ ಕೊರತೆಗಳು ಮಗುವಿನ ಭವಿಷ್ಯದ ಅಂತಿಮ ತೀರ್ಪಾಗಬಾರದು. ಕೆಸರಿನ ನಡುವೆ ಕಮಲ ಅರಳುವಂತೆ, ಕಷ್ಟಗಳ ನಡುವೆ ಒಂದು ಮಗು ಅರಳಬಹುದು. ಕೆಲವೊಮ್ಮೆ ಅದಕ್ಕೆ



ಬೇಕಾಗಿರುವುದು ದೊಡ್ಡ ಸಹಾಯವಲ್ಲ“ನೀನು ಮಾಡಬಲ್ಲೆ” ಎಂದು ನಂಬುವ ಒಬ್ಬ ಶಿಕ್ಷಕ.

ಇವೆಲ್ಲವನ್ನೂ ನೋಡಿದಾಗ ಗಣೇಶನ ಮೂರ್ತಿ ನನಗೆ ನಿಧಾನವಾಗಿ ಒಂದು ಕನ್ನಡಿಯಾಗಿ ಬದಲಾಗುತ್ತದೆ. ದೊಡ್ಡ ತಲೆ ಚಿಂತನೆ ಕಲಿಸುತ್ತದೆ; ದೊಡ್ಡ ಕಿವಿಗಳು ಕೇಳುವುದನ್ನು ಕಲಿಸುತ್ತವೆ; ಸಣ್ಣ ಕಣ್ಣುಗಳು ಗುರಿ ತೋರಿಸುತ್ತವೆ; ಸೊಂಡಿಲು ಹೊಂದಿಕೊಳ್ಳುವುದನ್ನು ಕಲಿಸುತ್ತದೆ; ಪಾಶ ಭಯದ ಬಂಧನ ಬಿಡಿಸುತ್ತದೆ; ಅಂಕುಶ ಶಿಸ್ತಿನ ದಾರಿ ತೋರಿಸುತ್ತದೆ; ಪರಶು ತಪ್ಪು ಕಲ್ಪನೆಗಳನ್ನು ಕತ್ತರಿಸುತ್ತದೆ; ಮೋದಕ ಪರಿಶ್ರಮದ ಫಲದ ಸಿಹಿಯನ್ನು ನೆನಪಿಸುತ್ತದೆ; ಕಮಲ ಪ್ರತಿಕೂಲ ಪರಿಸ್ಥಿತಿಯಲ್ಲೂ ಅರಳುವುದನ್ನು ಕಲಿಸುತ್ತದೆ.

ಹೀಗಾಗಿ ನಾನು, ಪ್ರಶಾಂತ ಕುಲಕರ್ಣಿ, ಒಬ್ಬ ಶಿಕ್ಷಕನಾಗಿ ಗಣೇಶನನ್ನು ನೋಡುವಾಗ, ದೇವರಲ್ಲಿ ಕೇವಲ ವರವನ್ನು ಬೇಡುವ ಮನಸ್ಸು ನನ್ನದಾಗುವುದಿಲ್ಲ. ನನ್ನ ಮುಂದೆ ಕುಳಿತಿರುವ ಪ್ರತಿಯೊಂದು ಮಗುವಿನೊಳಗಿನ ಜ್ಞಾನ, ಪ್ರತಿಭೆ, ಧೈರ್ಯ ಮತ್ತು ಮನುಷ್ಯತ್ವವನ್ನು ಗುರುತಿಸಿ ಬೆಳೆಸಬೇಕು ಎಂಬ ಜವಾಬ್ದಾರಿ ನನ್ನೊಳಗೆ ಮೂಡುತ್ತದೆ. ಶಿಕ್ಷಣವೆಂದರೆ ಮಗುವಿನ ತಲೆಗೆ ವಿಷಯ ತುಂಬುವುದು ಮಾತ್ರವಲ್ಲ; ಅದರ ತಲೆಯಲ್ಲಿ ವಿವೇಕ, ಕಣ್ಣಿನಲ್ಲಿ ಕನಸು, ಹೃದಯದಲ್ಲಿ ಕರುಣೆ, ನಡೆಗಳಲ್ಲಿ ಶಿಸ್ತು ಮತ್ತು ಬದುಕಿನಲ್ಲಿ ಆತ್ಮವಿಶ್ವಾಸ ತುಂಬುವುದು.

ಗಣೇಶ ಚತುರ್ಥಿಯಂದು ಮಣ್ಣಿನಿಂದ ಗಣೇಶನನ್ನು ರೂಪಿಸಿ, ನಂತರ ವಿಸರ್ಜಿಸುತ್ತೇವೆ. ಆದರೆ ಶಿಕ್ಷಕನ ದೃಷ್ಟಿಯಲ್ಲಿ ನಿಜವಾದ ವಿಸರ್ಜನೆ ಎಂದರೆ ವಿದ್ಯಾರ್ಥಿ ಒಂದು ದಿನ ಶಾಲೆಯ ಗೇಟ್ ದಾಟಿ ತನ್ನದೇ ಬದುಕಿನ ದಾರಿಯಲ್ಲಿ ಹೊರಡುವುದು. ಆ ದಿನ ಅವನು ನಮ್ಮ ಕಣ್ಣಿಗೆ ಕಾಣದಿರಬಹುದು; ಆದರೆ ಅವನ ನಡೆ, ನಿರ್ಧಾರ, ಮನುಷ್ಯತ್ವ ಮತ್ತು ಯಶಸ್ಸಿನಲ್ಲಿ ನಮ್ಮ ಪಾಠದ ಒಂದು ತುಣುಕು ಉಳಿದಿದ್ದರೆಅದೇ ಶಿಕ್ಷಕನ ಶಾಶ್ವತತೆ.

ಮಣ್ಣಿನ ಗಣೇಶನು ವಿಸರ್ಜನೆಯಾಗಬಹುದು;

ಆದರೆ ಮಗುವಿನ ಮನದಲ್ಲಿ ಬಿತ್ತಿದ ಮೌಲ್ಯಗಳು ವಿಸರ್ಜನೆಯಾಗಬಾರದು.

ಮೂರ್ತಿ ಕರಗಬಹುದು; ಪಾಠ ಕರಗಬಾರದು.

ಹಬ್ಬ ಮುಗಿಯಬಹುದು; ಶಿಕ್ಷಣದ ಬೆಳಕು ಮಾತ್ರ ಮುಂದುವರಿಯಬೇಕು.

ಆಗ ಗಣೇಶನು ಕೇವಲ ನಮ್ಮ ಪೂಜಾಕೋಣೆಯ ದೇವರಾಗಿರುವುದಿಲ್ಲ; ನನ್ನಂತಹ ಶಿಕ್ಷಕರಿಗೆ ಪ್ರತಿದಿನವೂ ಹೊಸ ಪಾಠ ಕಲಿಸುವ ಮಹಾನ್ ಗುರುವಾಗುತ್ತಾನೆ.

ಲೇಖನ
– ಪ್ರಶಾಂತ ಕುಲಕರ್ಣಿ.
ಉಪನ್ಯಾಸಕರು
ಶ್ರೀ ಪದ್ಮರಾಜ ಬಿ.ಇಡಿ ಕಾಲೇಜು
ಸಿಂದಗಿ
ವಿಜಯಪುರ ಜಿಲ್ಲೆ



# ಮೋದವನ್ನು ತರುವ ಮೋದಕ ನೈವೇದ್ಯ

■ ಉದಯರಶ್ಮಿ ದಿನಪತ್ರಿಕೆ

ಹಿಂದೂ ಸನಾತನ ಧರ್ಮದಲ್ಲಿ ಪ್ರತಿಯೊಂದು ದೇವರಿಗೆ ಇಷ್ಟವಾದ ನೈವೇದ್ಯ ಅರ್ಪಿಸಲಾಗುತ್ತದೆ ಅಂತೆಯೇ ನಮ್ಮ ಆದಿ ಪೂಜಿತನಿಗೆ ಮೋದಕ ಬಹಳ ಪ್ರೀತಿ. ಏಕೆಂದರೆ ಮೋದ ಎಂದರೆ ಸಂತೋಷ.

ಮೋದಕವು ಗಣೇಶ ಚತುರ್ಥಿಯ ಸಂದರ್ಭದಲ್ಲಿ ಗಣಪತಿಗೆ ನೈವೇದ್ಯವಾಗಿ ಅರ್ಪಿಸುವ ಪ್ರಮುಖ ಸಿಹಿ ತಿಂಡಿ. ಮೋದಕ ಎಂದರೆ ಸಂತೋಷ, ಜ್ಞಾನ ಮತ್ತು ಸಿಹಿಯಾದ ಜೀವನದ ಸಂಕೇತ ಎಂದು ಪರಿಗಣಿಸಲಾಗುತ್ತದೆ.

ಗಣಪತಿಗೆ ಪ್ರಿಯವಾದ ನೈವೇದ್ಯ

ಪುರಾಣ ಮತ್ತು ಜನಪದ ಪರಂಪರೆಯಲ್ಲಿ ಮೋದಕವು ಶ್ರೀ ಗಣೇಶನಿಗೆ ಅತ್ಯಂತ ಪ್ರಿಯವೆಂದು ನಂಬಲಾಗಿದೆ.

### ಜ್ಞಾನದ ಸಂಕೇತ

ಮೋದಕದ ಒಳಭಾಗದಲ್ಲಿರುವ ಸಿಹಿ ಪೂರ್ಣ ಜ್ಞಾನವನ್ನು ಸೂಚಿಸುತ್ತದೆ ಎಂಬ ಆಧ್ಯಾತ್ಮಿಕ ಅರ್ಥವಿದೆ.

### ಶ್ರಮದ ಫಲ


ಹೊರಭಾಗದ ಪದರವನ್ನು ದಾಟಿ ಒಳಗಿನ ಸಿಹಿಯನ್ನು ಪಡೆಯುವಂತೆ, ಪರಿಶ್ರಮದ ನಂತರ ಜ್ಞಾನ ಮತ್ತು ಯಶಸ್ಸು ದೊರೆಯುತ್ತದೆ ಎಂಬ ಸಂದೇಶ ನೀಡುತ್ತದೆ.

### ಸಾತ್ವಿಕ ನೈವೇದ್ಯ

ಅಕ್ಕಿ ಹಿಟ್ಟು,ಪುಟಾಣಿ ತೆಂಗಿನಕಾಯಿ, ಬೆಲ್ಲ ಮುಂತಾದ ಎಳ್ಳು,ಸುಗಂಧ ಪದಾರ್ಥವಾದ ಏಲಕ್ಕಿ, ಪದಾರ್ಥಗಳಿಂದ ತಯಾರಿಸುವ ಮೋದಕವನ್ನು ಗಣೇಶನಿಗೆ ಭಕ್ತಿಯಿಂದ ಅರ್ಪಿಸಲಾಗುತ್ತದೆ.

### ಸಂತೋಷದ ಸಂಕೇತ

‘ಮೋದ’ ಎಂದರೆ ಆನಂದ/ಸಂತೋಷ ಎಂಬ ಅರ್ಥವೂ ಇರುವುದರಿಂದ ಮೋದಕವು



ಸಂತೋಷದ ಪ್ರತೀಕವಾಗಿದೆ.

ಒಟ್ಟಿನಲ್ಲಿ, ಮೋದಕವು ಕೇವಲ ಸಿಹಿ ತಿಂಡಿಯಲ್ಲ; ಭಕ್ತಿ, ಜ್ಞಾನ, ಪರಿಶ್ರಮದ ಫಲ ಮತ್ತು ಸಂತೋಷದ ಸಂದೇಶವನ್ನು ಸಾರುವ ಗಣೇಶನ ಪ್ರಿಯ ನೈವೇದ್ಯವಾಗಿದೆ.

ಗಣಪತಿಗೆ ಮೋದಕ ಅರ್ಪಿಸುವ ಲಾಭಗಳು

ಮೋದಕವು ಶ್ರೀ ಗಣೇಶನಿಗೆ ಅತ್ಯಂತ ಪ್ರಿಯವಾದ ನೈವೇದ್ಯವೆಂದು ಹಿಂದೂ ಸಂಪ್ರದಾಯದಲ್ಲಿ ನಂಬಲಾಗಿದೆ. ಗಣೇಶ ಚತುರ್ಥಿ ಸೇರಿದಂತೆ ವಿಶೇಷ ದಿನಗಳಲ್ಲಿ ಮೋದಕ ಅರ್ಪಿಸುವುದಕ್ಕೆ ಧಾರ್ಮಿಕವಾಗಿ ಹಲವು ಮಹತ್ವಗಳಿವೆ.

ವಿಘ್ನಗಳು ನಿವಾರಣೆಯಾಗಲಿ ಎಂಬ ಪ್ರಾರ್ಥನೆಯೊಂದಿಗೆ ಮೋದಕ ಅರ್ಪಿಸಲಾಗುತ್ತದೆ.

ಬುದ್ಧಿ, ಜ್ಞಾನ ಮತ್ತು ವಿವೇಕ ವೃದ್ಧಿಯಾಗಲೆಂದು ಗಣಪತಿಯನ್ನು ಪೂಜಿಸಲಾಗುತ್ತದೆ.

ಕಾರ್ಯಸಿದ್ಧಿ ಮತ್ತು ಶುಭಫಲ ದೊರೆಯಲಿ ಎಂಬ ಭಕ್ತಿಯ ಸಂಕೇತವಾಗಿದೆ.

ಸಮೃದ್ಧಿ ಮತ್ತು ಐಶ್ವರ್ಯ ಮನೆಗೆ ಬರಲಿ ಎಂಬ ಆಶಯದಿಂದ ನೈವೇದ್ಯ ಅರ್ಪಿಸುತ್ತಾರೆ.

ಕುಟುಂಬದಲ್ಲಿ ಆರೋಗ್ಯ ಭಾಗ್ಯ ಸುಖ, ಶಾಂತಿ ಮತ್ತು ಸಂತೋಷ ಇರಲೆಂದು ಪ್ರಾರ್ಥಿಸಲಾಗುತ್ತದೆ.

ವಿದ್ಯಾರ್ಥಿಗಳು ವಿದ್ಯೆ ಮತ್ತು ಏಕಾಗ್ರತೆಗಾಗಿ ಗಣಪತಿಗೆ ಮೋದಕ ಅರ್ಪಿಸುತ್ತಾರೆ.

ಮೋದಕದ ಸಿಹಿತನವು ಜೀವನದಲ್ಲಿ ಸಿಹಿ ಮತ್ತು ಸಂತೋಷ ತುಂಬಲಿ ಎಂಬ ಸಂಕೇತವೆಂದು ಪರಿಗಣಿಸಲಾಗುತ್ತದೆ.

ಎಲ್ಲರಿಗೂ ಗೌರಿ ಗಣೇಶ ಹಬ್ಬದ ಶುಭಾಶಯಗಳು..



ಲೇಖನ
– ಶಿಲ್ಪಾ, ಮೃತ್ಯುಂಜಯ,
ಮಿಣಜಗಿ.
ಕೆ. ಇ.ಬೋರ್ಡ್ ಸೆಂಟ್ರಲ್
ಸ್ಕೂಲ್
ಧಾರವಾಡ



# ಹೈದ್ರಾಬಾದ್ ವಿಮೋಚನಾ ದಿನಾಚರಣೆಗೆ ಆಗ್ರಹಿಸಿ ಮನವಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ವಿಜಯಪುರ ವಿಭಾಗೀಯ ಕಚೇರಿ ಹಾಗೂ ಎಲ್ಲ ಘಟಕಗಳಲ್ಲಿ ಹೈದ್ರಾಬಾದ್ ವಿಮೋಚನಾ ದಿನಾಚರಣೆ (ಕಲ್ಯಾಣ ಕರ್ನಾಟಕ ಉತ್ಸವ) ಆಚರಿಸಲು ಆಗ್ರಹಿಸಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ ಎಮ್ ವೈ ಪಾಟೀಲ ಹಾಗೂ ವಿಭಾಗೀಯ ನಿಯಂತ್ರಣಾಧಿಕಾರಿ ದೇವಾನಂದ ಬಿರಾದಾರ ಅವರಿಗೆ ಸಾರಿಗೆ ಅಧಿಕಾರಿ ಮಂಜುನಾಥ ಕೋಟ್ಯಾಳ ಅವರ ಮೂಲಕ ವಿಜಯಪುರ ಜಿಲ್ಲಾ 371 (ಜೆ) ಹೋರಾಟ ಸಮಿತಿಯಿಂದ ಇಂದು ಮನವಿ ಸಲ್ಲಿಸಿದರು.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಎಲ್ಲ ವಿಭಾಗಗಳಲ್ಲಿ ಹೈದ್ರಾಬಾದ್ ವಿಮೋಚನಾ ದಿನ (ಕಲ್ಯಾಣ ಕರ್ನಾಟಕ ಉತ್ಸವ) ವನ್ನು ಆಚರಣೆ ಮಾಡುತ್ತ ಬರುತ್ತಿದ್ದಾರೆ. ಈ ಬಾರಿ ವಿಜಯಪುರ ವಿಭಾಗದ ಕೇಂದ್ರ ಕಚೇರಿ ಸೇರಿದಂತೆ ಎಲ್ಲ ಘಟಕಗಳಲ್ಲಿ ಹೈದ್ರಾಬಾದ್ ವಿಮೋಚನಾ ದಿನ (ಕಲ್ಯಾಣ ಕರ್ನಾಟಕ ಉತ್ಸವ ) ಆಚರಣೆ ಮಾಡಿ ವಿಮೋಚನಾ ಚಳುವಳಿ ನೇತೃತ್ವ ವಹಿಸಿದ ಸ್ವಾಮಿ ರಾಮಾನಂದ ತೀರ್ಥರು, ಸರ್ದಾರ ಡಾ ಬಸವರಾಜ ನಾಗೂರು, ಸಿದ್ದಗೊಂಡಪ್ಪ ಗೌಡ ಪಾಟೀಲ ಅವರು ಸೇರಿದಂತೆ ಈ ಭಾಗದ ಅನೇಕ ಸ್ವಾತಂತ್ರ ಹೋರಾಟಗಾರರು



ಹಾಗೂ ವಿಮೋಚನಾ ಚಳುವಳಿಯ ಮಹಾನ್ ಚೇತನಗಳಿಗೆ ಗೌರವ ಸಲ್ಲಿಸಬೇಕು ಎಂದು ಹೋರಾಟಗಾ ರರು ಒತ್ತಾಯಿಸಿದರು.ಈ ಸಂದರ್ಭದಲ್ಲಿ ಹೋರಾಟ ಗಾರರಾದ ವಿನೋದ ಖೇಡ ಲಾಯಪ್ಪ ಇಂಗಳೆ ಅನಿಲ ಇಕ್ಕಡೆ, ಗಿರೀಶ ಕಲಘಟಗಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಹಕ್ಕುಗಳ ಅರಿವು ಮೂಡಿದಾಗಲೇ ಶೋಷಣೆಗೆ ಕಡಿವಾಣ

■ ಉದಯರಶ್ಮಿ ದಿನಪತ್ರಿಕೆ




## ಮಾನವ ಹಕ್ಕುಗಳ ಜಾಗೃತಿ ಸಮಾವೇಶ । ಸಾಧಕರಿಗೆ ಪ್ರಶಸ್ತಿ ಪ್ರದಾನ । ನಿವೃತ್ತ ನ್ಯಾಯಾಧೀಶ ಜಿ.ಕೆ.ಗೋಖಲೆ ಅಭಿಮತ

ಮುದ್ದೇಬಿಹಾಳ: ಮಾನವ ಹಕ್ಕುಗಳು ಕೇವಲ ಕಾನೂನು ಪುಸ್ತಕಗಳಲ್ಲಿರುವ ಪದಗಳಲ್ಲ. ಜಾತಿ, ಧರ್ಮ, ಲಿಂಗ, ಆರ್ಥಿಕ ಸ್ಥಿತಿ ಸೇರಿದಂತೆ ಯಾವುದೇ ಭೇದವಿಲ್ಲದೆ ಪ್ರತಿಯೊಬ್ಬ ಮನುಷ್ಯನಿಗೂ ಗೌರವದಿಂದ ಬದುಕುವ ಹಕ್ಕಿದೆ. ಈ ಹಕ್ಕುಗಳ ಉಲ್ಲಂಘನೆಯಾದಾಗ ಮೌನವಾಗಿರುವುದಕ್ಕಿಂತ ಕಾನೂನು ಮತ್ತು ಸಂವಿಧಾನದ ಚೌಕಟ್ಟಿನಲ್ಲಿ ಧ್ವನಿ ಎತ್ತುವ ಮನೋಭಾವವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು ಎಂದು ನಿವೃತ್ತ ನ್ಯಾಯಾಧೀಶ ಜಿ.ಕೆ.ಗೋಖಲೆ ಕರೆ ನೀಡಿದರು.

ಪಟ್ಟಣದ ಖಾಸಗಿ ಹೋಟಲ್ ನ ಫಂಕ್ಷನ್ ಹಾಲ್ ನಲ್ಲಿ ಯೂತ್ ಫಾರ್ ಹ್ಯೂಮನ್ ರೈಟ್ಸ್ ಜಿಲ್ಲಾ ಘಟಕದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮಾನವ ಹಕ್ಕುಗಳ ಜಾಗೃತಿ ಸಮಾವೇಶ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಗೈದ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಕ್ಕುಗಳನ್ನು ಕೇಳುವ ಧೈರ್ಯಕ್ಕೂ ಮೊದಲು, ಅವುಗಳ ಬಗ್ಗೆ ಅರಿವು ಇರಬೇಕು. ತನ್ನ ಹಕ್ಕುಗಳ ಅರಿವು ಹೊಂದಿದ ವ್ಯಕ್ತಿ ಮಾತ್ರ ಅನ್ಯಾಯದ ವಿರುದ್ಧ ಕಾನೂನುಬದ್ಧವಾಗಿ ಹೋರಾಡಲು ಸಾಧ್ಯ. ಸಮಾಜದಲ್ಲಿ ನಡೆಯುವ ಅನ್ಯಾಯ, ಶೋಷಣೆ, ತಾರತಮ್ಯ ಹಾಗೂ ದೌರ್ಜನ್ಯಗಳ ವಿರುದ್ಧ ಜಾಗೃತಿ ಮೂಡಿಸುವಲ್ಲಿ ಯುವಜನರ ಪಾತ್ರ ಮಹತ್ವದ್ದಾಗಿದೆ. ಗ್ರಾಮೀಣ ಭಾಗದ ಜನರಿಗೂ ತಮ್ಮ ಕಾನೂನುಬದ್ಧ ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಕೆಲಸ ನಿರಂತರವಾಗಿ ನಡೆಯಬೇಕು ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಎಸ್‌ಸಿ, ಎಸ್‌ಟಿ ದೌರ್ಜನ್ಯ ಪ್ರತಿಭಂಧಕ ಮೇಲುಸ್ತುವಾರಿ ಸಮಿತಿಯ ಸದಸ್ಯ ಅಭಿಷೇಕ ಚಕ್ರವರ್ತಿ ಮಾತನಾಡಿ, ಅಧಿಕಾರವಿದೆ ಎಂಬ ಕಾರಣಕ್ಕೆ ಸಾಮಾನ್ಯ ನಾಗರಿಕನ ಹಕ್ಕುಗಳನ್ನು ತುಳಿಯಲು ಸಾಧ್ಯವಿಲ್ಲ. ಹಣವಿದೆ ಎಂಬ ಕಾರಣಕ್ಕೆ ಬಡವನ ಧ್ವನಿಯನ್ನು ಅಡಗಿಸೋಕೆ ಸಾಧ್ಯವಿಲ್ಲ. ಹಕ್ಕುಗಳ ಬಗ್ಗೆ ಮಾತನಾಡುವಾಗ ಕರ್ತವ್ಯಗಳನ್ನೂ ಮರೆಯಬಾರದು. ನಮ್ಮ ಹಕ್ಕು ಇನ್ನೊಬ್ಬರ ಹಕ್ಕಿಗೆ ಧಕ್ಕೆ ತರಬಾರದು. ಪರಸ್ಪರ ಗೌರವ, ಸಮಾನತೆ ಮತ್ತು ಸಹಬಾಳ್ವೆಯ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಯೂಫಾಹ್ಯೂರೈ ನ ಸಂಸ್ಥಾಪಕ ಅಧ್ಯಕ್ಷ ಮಲ್ಲಿಕಾರ್ಜುನ ರಾಜು ಮಾತನಾಡಿ, ಸ್ವಾತಂತ್ರಕ್ಕೂ ಮೊದಲು ನಾವು ವಿದೇಶಿಯರ ವಿರುದ್ಧ ಹೋರಾಟ ಮಾಡಿದ್ದೆವು. ದೇಶ ಸ್ವತಂತ್ರವಾದ ನಂತರ ನಮ್ಮ ಹಕ್ಕುಗಳು, ಸ್ವಾತಂತ್ರ ಮತ್ತು ಗೌರವವನ್ನು ಕಾಪಾಡಿಕೊಂಡು ಬದುಕಬಹುದು ಎಂಬ ಆಶಯವಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ನಮ್ಮ ಹಕ್ಕುಗಳನ್ನು ಕಸಿದುಕೊಳ್ಳುತ್ತಿರುವವರು ನಮ್ಮ ಸುತ್ತಮುತ್ತಲಿನವರೇ ಆಗಿರುವುದು ದುರಂತದ ಸಂಗತಿ. ಪ್ರತಿದಿನ ಒಂದಲ್ಲ ಒಂದು ಕ್ಷೇತ್ರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ನಡೆಯುತ್ತಲೇ ಇದೆ. ಬಡವನ ಹಕ್ಕು, ಮಹಿಳೆಯರ ಹಕ್ಕು, ಮಕ್ಕಳ ಹಕ್ಕು, ಕಾರ್ಮಿಕರ ಹಕ್ಕು, ದುರ್ಬಲ ವರ್ಗಗಳ ಹಕ್ಕು ಹೀಗೆ ಎಲ್ಲೆಡೆ ಯಾವುದೋ ರೂಪದಲ್ಲಿ ಉಲ್ಲಂಘನೆ ಕಾಣಿಸುತ್ತಿದೆ. ಇಂತಹ ಪ್ರಸಂಗಗಳು ಎದುರುದಾಗ ಪ್ರತಿಯೊಬ್ಬರೂ ಧ್ವನಿ ಎತ್ತಬೇಕು ಎಂದರು.

ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ ದ ದಕ್ಷಿಣ ಭಾರತದ ಪ್ರ.ಕಾರ್ಯದರ್ಶಿ ಎ.ಬಿ.ಹೊಸಮನಿ, ರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿಯ ರಾಜ್ಯ ಉಪಾಧ್ಯಕ್ಷ ಪುಟ್ಟರಂಗಯ್ಯ ಎನ್, ಸಮಾಜ ಸೇವಕ ಅಯ್ಯಪ್ಪ ದೊಡಮನಿ ಮಾತನಾಡಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ 75 ಸಾಧಕರಿಗೆ ಹಸಿರು ಉಸಿರು, ಸಮಾಜ ರತ್ನ, ವೀರ ರತ್ನ, ಸಾಧಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಂಘಟನೆಯ ಜಿಲ್ಲಾ ಮತ್ತು ತಾಲೂಕು ಘಟಕದ ಪದಾಧಿಕಾರಿಗಳಿಗೆ ಐಡಿ ಕಾರ್ಡ ವಿತರಿಸಲಾಯಿತು. ಇದೇ ವೇಳೆ ಸಿದ್ದಣ್ಣ ಚಲವಾದಿ ರಚಿತ ಹುಟ್ಟು ಸಾವು ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು. ಹಿರಿಯ ಸಾಹಿತಿ ಶಿವಪುತ್ರ ಅಜಮನಿ, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ ಎ.ಆರ್.ಮುಲ್ಲಾ, ಜಂಟಿ ಕಾರ್ಯದರ್ಶಿ ಎಸ್.ಕೆ.ಘಾಟಿ, ಕಲಾವಿದ ಎಂ.ಪಿ.ವಾಳದವರ, ದ್ಯಾಮಣ್ಣ ಚಲವಾದಿ, ಪ್ರಮುಖರಾದ ಮುತ್ತು ಹಿರೇಮಠ, ಶ್ರವಣಕುಮಾರ ಪೂಜಾರಿ, ಪವಾಡೆಪ್ಪ ಮಾದರ, ಶರಣಪ್ಪ ಮಾದಶೆಟ್ಟಿ, ಶಿವಪುತ್ರ ವಡ್ಡರ, ಹಣಮಂತ ಹಾದಿಮನಿ, ಸುಶ್ಮಿತಾ ಬಳ್ಳಾರಿ, ಶಾಂತಮ್ಮ ಕೊಂಡಗೂಳಿ, ಶಕುಂತಲಾ ಪೂಜಾರಿ, ಸೋಮು ಗಸ್ತಿಗಾರ ಭಾಗಿಯಾಗಿ ಕಾರ್ಯಕ್ರಮದ ಶೋಭೆಯನ್ನು ಹೆಚ್ಚಿಸಿದರು. ಸಂಘಟನೆಯ ಜಿಲ್ಲಾಧ್ಯಕ್ಷ ಪ್ರಧಾನಿ ವಾಲಿಕಾರ ಸಂವಿಧಾನ ಪೀಠಿಕೆಯನ್ನು ಬೋಧಿಸಿದರು. ಎಸ್.ಎಸ್.ಮಠ ಮತ್ತು ಮುತ್ತು ತೋಟಿಹಾಳ ನಿರ್ವಹಿಸಿದರು.



# ಗುರಾನಿ ಎಸ್ಟೇಟ್ಸ್ ತಂಡದಿಂದ ಗಣೇಶೋತ್ಸವ

■ ಉದಯರಶ್ಮಿ ದಿನಪತ್ರಿಕೆ


ದಾವಣಗೆರೆ: ನಗರದ ರಿಯಲ್ ಮೀಡಿಯಾ ಹಾಗೂ ಗುರಾನಿ ಎಸ್ಟೇಟ್ಸ್ ನ ತಂಡದವರು ದಗಡು ಸೇಟ್ ಮಾದರಿಯ ವಿಶಿಷ್ಟ ಲಾಲ್ ಗಣಪತಿ ಯನ್ನು ಸಂಭ್ರಮಾಚರಣೆಯಿಂದ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಸಂಸ್ಥೆಯ ನಿಂಗೋಜಿ ರಾವ್ ಆರ್ ಗುಜ್ಜರ್, ರಾಜೇಂದ್ರ ಕುಮಾರ್ ಆರ್ ಗುಜ್ಜರ್, ನಾಗರಾಜ್ ಎನ್ ಗುಜ್ಜರ್, ಸಿದ್ದಾಂತ್ ಎನ್ ಗುಜ್ಜರ್, ಹಾಗೂ ಆಕಾಶ್ ಪಿ ಗುಜ್ಜರ್, ನಾಗಾರ್ಜುನ್ ಆರ್ ಗುಜ್ಜರ್, ಆರುಶ್ ಎನ್ ಗುಜ್ಜರ್ ಮತ್ತು ಸಾರ್ಥ್ ಎ ಗುಜ್ಜರ್ ಹಾಜರಿದ್ದರು.

ಈ ಸಂದರ್ಭದಲ್ಲಿ ಸಮಸ್ತ ಕರ್ನಾಟಕದ ಎಲ್ಲ ಗೌರವಾನ್ವಿತ ಪತ್ರಿಕಾ ಮಿತ್ರರಿಗೆ ಗಣಪತಿ ಹಬ್ಬದ ಶುಭ ಕೋರಿದರು

# 'ವೀರ ರತ್ನ' ಪ್ರಶಸ್ತಿ ಪಡೆದ ಚೇತನ ಶಿವಶಿಂಪಿ

■ ಉದಯರಶ್ಮಿ ದಿನಪತ್ರಿಕೆ



ಮುದ್ದೇಬಿಹಾಳ: ಪಟ್ಟಣದ ಪಂಜುರ್ಲಿ ಫಂಕ್ಷನ್ ಹಾಲ್ ನಲ್ಲಿ ನಡೆದ ಮಾನವ ಹಕ್ಕುಗಳ ಜಾಗೃತಿ ಸಮಾವೇಶ ಹಾಗೂ ವಿವಿಧ ಕ್ಷೇತ್ರಗಳಲ್ಲಿನ ಸಾಧಕರಿಗೆ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ನ್ಯಾಯವಾದಿ ಹಾಗೂ ಪತ್ರಕರ್ತ ಚೇತನ. ಮ.ಶಿವಶಿಂಪಿ ಅವರಿಗೆ ರಾಜ್ಯ ಯೂತ್ ಫಾರ್ ಹ್ಯೂಮನ್ ರೈಟ್ಸ್ ವತಿಯಿಂದ ಕೊಡಮಾಡುವ ವೀರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ವೇಳೆ ನಿವೃತ್ತ ನ್ಯಾಯಾಧೀಶ ಜಿ.ಕೆ. ಗೋಖಲೆ, ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ಮಲ್ಲಿಕಾರ್ಜುನ ರಾಜು, ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾದ ದಕ್ಷಿಣ ಭಾರತದ ಪ್ರ. ಕಾರ್ಯದರ್ಶಿ ಎ.ಬಿ.ಹೊಸಮನಿ, ಎಸ್‌ಸಿ, ಎಸ್‌ಟಿ ದೌರ್ಜನ್ಯ ಪ್ರತಿಬಂಧಕ ಮೇಲುಸ್ತುವಾರಿ ಸಮಿತಿಯ ಸದಸ್ಯ ಅಭಿಷೇಕ ಚಕ್ರವರ್ತಿ, ರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿಯ ರಾಜ್ಯ ಉಪಾಧ್ಯಕ್ಷ ಪುಟ್ಟರಂಗಯ್ಯ ಎನ್, ಸಮಾಜ ಸೇವಕ ಅಯ್ಯಪ್ಪ ದೊಡಮನಿ ಸೇರಿದಂತೆ ಹಲವರು ಇದ್ದರು.



# ಜನಸಾಮಾನ್ಯರ ಸಮಸ್ಯೆಗೆ ಜೆಡಿಎಸ್ ದಿಂದ ಮಾತ್ರ ಪರಿಹಾರ

■ ಉದಯರಶ್ಮಿ ದಿನಪತ್ರಿಕೆ

ಆಲಮೇಲ: ರೈತರ, ಜನಸಾಮಾನ್ಯರ ಸಮಸ್ಯೆ ಅರಿತು ಸಮಸ್ಯೆಗೆ ಪರಿಹಾರ ದೊರೆಯುವದು ಜೆಡಿಎಸ್ ಪಕ್ಷದಿಂದ ಮಾತ್ರ ಸಾಧ್ಯ ಎಂದು ಗೊಲ್ಲಾಳಪ್ಪಗೌಡ ಪಾಟೀಲ ಹೇಳಿದರು. ಅವರು ಆಲಮೇಲ ತಾಲೂಕ ಜೆಡಿಎಸ್ ಪಕ್ಷದ ಅಧ್ಯಕ್ಷರು ಮತ್ತು ನಗರ ಘಟಕ ಅಧ್ಯಕ್ಷರ ನೇಮಕಾತಿ ಮತ್ತು ವೀಕ್ಷಕರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಜೆಡಿಎಸ್ ಪಕ್ಷದ ಕಾರ್ಯಕರ್ತರು ಪಕ್ಷ ಘಟನೆ ಕೆಲಸ ಮಾಡಿ ಮುಂದಿನ ಬಾರಿ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಹೇಳಿದರು.

ನೂತನ ಅಧ್ಯಕ್ಷರುಗಳಾದ ಪ್ರದೀಪ ನಯ್ಕೋಡಿ, ಹುಸೇನ ತಾಂಬೋಳಿ ಮಾತನಾಡಿ, ಜೆಡಿಎಸ್ ಪಕ್ಷದ ವರಿಷ್ಟರದ ಕೇಂದ್ರ ಸಚಿವರಾದ ಎಚ್. ಡಿ. ಕುಮಾರಸ್ವಾಮಿ ಅಧಿಕಾರಕ್ಕೆ ಬರಲು ಪಕ್ಷ ನೀಡಿವ ಜವಾಬ್ದಾರಿ ಸಾರಿಯಾಗಿ ನಿರ್ವಹಿಸಿ ಪ್ರಾಮಾಣಿಕವಾಗಿ ಪಕ್ಷ ಸಂಘಟನಾ ಕೆಲಸ ಮಾಡುತ್ತೇವೆ ಎಂದು ಹೇಳಿದರು.

ಮುಖಂಡರಾದ ಶೈಲಜಾ ಸ್ಥಾವರಮಠ, ಶ್ರೀಶೈಲಗೌಡ ಇಂಡಿ, ಎಂ. ಎನ್. ಪಾಟೀಲ, ಸಿಂದಗಿಯ ಪ್ರಕಾಶ ಹಿರೇಕುರುಬರ, ಮಹಮ್ಮದ ಉಸ್ತಾದ, ಪುಂಡಲಿಕ ಬಿರಾದಾರ, ಶಿವಕುಮಾರ ಗುಂಡುಗೌಡ ಬಳಗಾನೂರ ಮುಂತಾದವರು ಇದ್ದರು. ನೂತನ ಆಲಮೇಲ ತಾಲ್ಲೂಕಾ ಅಧ್ಯಕ್ಷರಾಗಿ ಪ್ರದೀಪ ನಾಯ್ಕೋಡಿ ಮತ್ತು ಆಲಮೇಲ ನಗರ ಘಟಕ ಅಧ್ಯಕ್ಷರಾಗಿ ಹುಸೇನ ತಾಂಬೋಳಿ ಅವರನ್ನು ನೇಮಕ ಮಾಡಿದರು.

ಮುಖಂಡರು ಮತ್ತು ಕಾರ್ಯಕರ್ತರು ಸಭೆಯಲ್ಲಿ ಪಾಲ್ಗೊಂಡಿದ್ದರು.

# ಗ್ರಂಥಾಲಯಗಳು ನಿಜ ಮನುಷ್ಯರನು ಸೃಷ್ಟಿಸುತ್ತವೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಪುಸ್ತಕಗಳು ನಮ್ಮ ದಿನನಿತ್ಯದ ಗೆಳೆಯರಾಗಬೇಕು, ಪುಸ್ತಕಪ್ರೀತಿಯಿಂದ ಮನುಷ್ಯರೂಪದ ಜೀವಿಯೊಬ್ಬ ನಿಜವಾದ ಮನುಷ್ಯನಾಗಿ ರೂಪುಗೊಳ್ಳುವುದು ಸಾಧ್ಯವಾಗುತ್ತದೆಂದು ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಸಚಿವ ಸೋಮಲಿಂಗ ಗೆಣ್ಣೂರ ಹೇಳಿದರು.

ಭಾನುವಾರ ನಗರದ ನವರಸಪುರದಲ್ಲಿರುವ ತಿಕೋಟಾದ ಡಾ.ಪ್ರಕಾಶ ಪರಣಾಕಾರ ಅವರ ಮನೆಯಲ್ಲಿ ನಡೆದ "ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭ"ದ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

ಪ್ರತಿಯೊಂದು ಪುಸ್ತಕದ ಒಳಗೂ ನಮ್ಮೊಂದಿಗೆ ಸಂವಾದಕ್ಕೆ ಹಾತೊರೆಯುವ ಒಂದು ವ್ಯಕ್ತಿತ್ವ ಮತ್ತು ಮನಸ್ಸಿದೆ ದಿಕ್ಕು ತಪ್ಪಿಸುವ, ಮೌಢ್ಯಬಿತ್ತುವ ಕಂದಾಚಾರಕ್ಕೆ ದೂಡುವ ಪುಸ್ತಕಗಳ ತಿರಸ್ಕರಿಸಿ, ವೈಚಾರಿಕ ಹಾಗೂ ವೈಜ್ಞಾನಿಕತೆ ಬಿತ್ತುವ ಪುಸ್ತಕಗಳ ಓದಬೇಕು ಎಂದರು.

ಇನ್ನೋರ್ವ ಮುಖ್ಯ ಅತಿಥಿ ಡಾ.ಮಹಾಂತೇಶ ಬಿರಾದಾರಮಾತನಾಡಿ,ಒಂದುಪುಸ್ತಕವನ್ನೋದುವುದೆಂದರೆ ಬಸವಣ್ಣನ ಸಮಸಮಾಜವನು ಮುನ್ನಡೆಸುವುದು ಎಂದರ್ಥ. ಅದೊಂದು ಹೊಸ ಅನುಭವ ಹಾಗೂ ಪ್ರಪಂಚದಲ್ಲಿ ಸಹೃದಯರು ಕೈಗೊಳ್ಳುವ ಪರ್ಯಟನವೋ ಅಥವಾ ರಸಯಾತ್ರೆಯೋ ಆಗಿರುತ್ತದೆ ಎಂದರು.

ಅಧ್ಯಕ್ಷ ಸ್ಥಾನ ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಪ್ರೊ; ಬಸವರಾಜ ಜಾಲವಾದಿ ಮಾತನಾಡಿದರು.

**ಮನೆಗೊಂದು ಗ್ರಂಥಾಲಯ ಕಾರ್ಯಕ್ರಮದಲ್ಲಿ ಕುಲಸಚಿವ ಸೋಮಲಿಂಗ ಗೆಣ್ಣೂರ ಅಭಿಮತ**

ಕಕಮರಿ ಗುರುದೇವಾಶ್ರಮದ ಆತ್ಮಾರಾಮ ಸ್ವಾಮಿಗಳು ಆಶೀರ್ವಚನ ನೀಡಿದರು.

ವೇದಿಕೆಯ ಮೇಲೆ ಯರಡೋಣದ ಕುಮಾರೇಶ್ವರ ಸ್ವಾಮಿಗಳು ಪ್ರಗತಿಪರ ರೈತರಾದ ಮಲ್ಲಿಕಾರ್ಜುನ ಹಂಜಗಿ, ಶ್ರೀಧರ್ ಮುರಾಳೆ, ಕಬ್ಬೂರಿನ ಬಾಬೂರಾವ್ ಮಹಾರಾಜ್, ವಚನ ಪಠಣ ಮಾಡಿದ ವೀರೇಶ ಹಿರೇಮಠ ಹಾಜರಿದ್ದರು.

ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಬಸವರಾಜ ಸಾಲವಾಡಗಿ ನಿರ್ವಹಿಸಿದರು. ಸಹಪ್ರಾಧ್ಯಾಪಕ ಬಸವರಾಜ ಬೆಳಗಲಿ ವಚನ ಗಾಯನ ಮೂಲಕ ಸ್ವಾಗತಿಸಿದರು. ಸಿದ್ಧಾರ್ಥ ಪರಣಾಕರ ವಂದಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಪರಣಾಕರ ದಂಪತಿಗಳನ್ನು ಶಾಲು ಹೊದಿಸಿ ಸನ್ಮಾನಿಸಿ ಅಭಿನಂದನಾ ಪತ್ರ ನೀಡಲಾಯಿತು.

# ಕ್ರೀಡಾ ಪ್ರತಿಭೆಗಳನ್ನು ಪ್ರೋತ್ಸಾಹಿಸಿ :ಮಠಪತಿ

■ ಉದಯರಶ್ಮಿ ದಿನಪತ್ರಿಕೆ



ತಿಕೋಟಾ: ವಿದ್ಯಾರ್ಥಿಗಳಲ್ಲಿ ಕ್ರೀಡಾ ಮನೋಭಾವ ಬೆಳೆಸುವುದರ ಜೊತೆಗೆ ಗ್ರಾಮೀಣ ಭಾಗದಲ್ಲಿರುವ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ಸೂಕ್ತ ಪ್ರೋತ್ಸಾಹ ಹಾಗೂ ಉತ್ತಮ ವೇದಿಕೆ ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ತಾಲ್ಲೂಕು ನೌಕರರ ಸಂಘದ ಅಧ್ಯಕ್ಷ ಚೆನ್ನಯ್ಯ ಮಠಪತಿ ಹೇಳಿದರು.

ತಾಲ್ಲೂಕಿನ ಕನಮಡಿ ಕ್ಲಸ್ಟರ್ ಮಟ್ಟದ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡೆಯು ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಕ್ರೀಡೆಯಲ್ಲಿ ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ನಿರಂತರ ಅಭ್ಯಾಸ, ಶಿಸ್ತು ಹಾಗೂ ಆತ್ಮವಿಶ್ವಾಸದಿಂದ ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯ ಎಂದರು.

ಶಿಕ್ಷಣದ ಜತೆಗೆ ಕ್ರೀಡೆಗೂ ವಿದ್ಯಾರ್ಥಿಗಳು ಸಮಾನ ಆದ್ಯತೆ ನೀಡಬೇಕು. ಗ್ರಾಮೀಣ ಪ್ರದೇಶದಲ್ಲಿ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳಿದ್ದು, ಅವರಿಗೆ ಸೂಕ್ತ ಮಾರ್ಗದರ್ಶನ ಹಾಗೂ ತರಬೇತಿ ದೊರೆತರೆ ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಲು ಸಾಧ್ಯವಿದೆ. ಅಂತಹ ಪ್ರತಿಭೆಗಳನ್ನು ಆರಂಭದಲ್ಲಿಯೇ ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಶಿಕ್ಷಕರು, ಪೋಷಕರು ಹಾಗೂ ಸಮಾಜದ ಮೇಲಿದೆ ಎಂದು ಹೇಳಿದರು.

ಕ್ರೀಡಾಕೂಟದಲ್ಲಿ ಕನಮಡಿ ಕ್ಲಸ್ಟರ್ ವ್ಯಾಪ್ತಿಯ ಎಲ್ಲ ಶಾಲೆಗಳ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ಬಾಬುಗೌಡ ಬಿರಾದಾರ್, ಆರ್. ಎಸ್. ಪಾಟೀಲ, ಶ್ರೀಶೈಲ ವಿರಕ್ತಮಠ, ಪ್ರಕಾಶ್‌ಗೌಡ ಬಿರಾದಾರ್, ಶಿವಪ್ಪ ಮುನ್ನೋಳಿ, ಬಿ.ಕೆ. ನಾಟಿಕರ್, ವಿ.ವಿ. ಬಿರಾದಾರ್, ಸುಧೀರ್ ಹಳ್ಳಿಯಾಳ, ಬಿ.ಪಿ. ಪಾಟೀಲ, ಎಂ.ಎಂ. ಮಠಪತಿ, ಸದಾಶಿವ ಕುಂಬಾರ, ಆರ್.ವೈ. ಗೋಳಸಂಗಿ, ಎ.ಎ. ಪಾಟೀಲ ಸೇರಿದಂತೆ ಶಿಕ್ಷಕರು, ದೈಹಿಕ ಶಿಕ್ಷಣ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಶಾಲೆಯ ಮುಖ್ಯಗುರು ಸುನೀಲ ಬಿರಾದಾರ್ ಕಾರ್ಯಕ್ರಮ ನಿರೂಪಿಸಿದರು. ಸಿಆರ್‌ಪಿ ಅನಿಲ ಕೋಟ್ಯಾಳ ಸ್ವಾಗತಿಸಿದರು.

# ಅಹಿರಸಂಗ: ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಪ್ರಶಸ್ತಿ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಸನ್ 2024-25 ನೇ ಸಾಲಿನ ಉತ್ತಮ ಕಾರ್ಯ ನಿರ್ವಹಣೆಗಾಗಿ ತಾಲೂಕಿನ ಅಹಿರಸಂಗ ಗ್ರಾಮದ ಭೂದೇವಿ ಕಬ್ಬು ಬೆಳೆಯುವವರ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ವತಿಯಿಂದ 10 ಸಾವಿರ ನಗದು ಸಹಿತ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗಿದೆ.

ವಿಜಯಪುರದ ಬಿಡಿಸಿಸಿ ಬ್ಯಾಂಕ್ ಆವರಣದಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಸಂಘದ ಅಧ್ಯಕ್ಷ ಸಿದ್ದಣ್ಣ ಬೂದಿಹಾಳ ಹಾಗೂ ವ್ಯವಸ್ಥಾಪಕ ರಮೇಶ ಬಿರಾದಾರ ಅವರಿಗೆ ಪ್ರಶಸ್ತಿ ಪತ್ರ ಪ್ರಧಾನ ನಡೆಯಿತು.

ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ, ಮಾಜಿ ಸಚಿವ ಶಿವಾನಂದ ಪಾಟೀಲ, ಬ್ಯಂಕ್ ಉಪಧ್ಯಕ್ಷ ರಾಜಶೇಖರ ಗುಡದಿನ್ನಿ ಸೇರಿದಂತೆ ಬಿಡಿಸಿಸಿಬ್ಯಾಂಕ್ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



# ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅಭಿಮತ

# ಮಠ-ಮಾನ್ಯಗಳ ಅನ್ನ-ಅಕ್ಷರ ದಾಸೋಹದಿಂದ ನಾಡಿನಲ್ಲಿ ಬದಲಾವಣೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲೆಗೆ ಶಾಂತವೀರ ಶ್ರೀಗಳು ಮತ್ತು ಬಂಥನಾಳ ಸಂಗನಬಸವ ಸ್ವಾಮೀಜಿಗಳ ಕೊಡುಗೆ ಅಪಾರ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ಸೋಮವಾರ ಬಬಲೇಶ್ವರದ ಗುರುಪಾದೇಶ್ವರ ಮಠದ ಆವರಣದಲ್ಲಿ ನಡೆದ ಡಾ. ಮಹಾದೇವ ಶಿವಾಚಾರ್ಯರ ವಜ್ರ ಮಹೋತ್ಸವ ಹಾಗೂ ಮಲ್ಲಿಕಾರ್ಜುನ ದೇವರ ಪಟ್ಟಾಧಿಕಾರ ಕಾರ್ಯಕ್ರಮದಲ್ಲಿ ಅವರು ಸಾನ್ನಿಧ್ಯ ವಹಿಸಿದ್ದ ಜಗದ್ಗುರುಗಳಾದ ರಂಭಾಪುರಿಯ ಡಾ.ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಹಾಗೂ ಕಾಶಿಯ ಡಾ.ಚಂದ್ರಶೇಖರ ಶಿವಾಚಾರ್ಯರಿಗೆ ಗೌರವ ಸಮರ್ಪಿಸಿ ಅವರು ಮಾತನಾಡಿದರು.

ಬಿ.ಎಲ್.ಡಿ.ಇ ಶಿಕ್ಷಣ ಸಂಸ್ಥೆಯ ಆರಂಭ ಮತ್ತು ಬೆಳವಣಿಗೆಯಲ್ಲಿ ಶಾಂತವೀರ ಶ್ರೀಗಳ ಪಾತ್ರವಿದೆ. ಅವರಿಂದ ಬಬಲೇಶ್ವರ ಮಠ ಹೆಸರುವಾಸಿಯಾಗಿದೆ. ಈಗಿನ ಮಹಾದೇವ ಶಿವಾಚಾರ್ಯರು ಮೃದು ಮನಸ್ಸಿನವರು. ಸಾಮಾಜಿಕ ಏಳ್ಗೆ, ಭಕ್ತಿ ಪರಂಪರೆ ಮುಂದುವರಿಸಿಕೊಂಡು ಬಂದಿದ್ದಾರೆ. ಸದ್ಯ ಪಟ್ಟಾಧಿಕಾರ ಹೊಂದಿದ ಕಿರಿಯ ಶ್ರೀಗಳು ಖ್ಯಾತ ಯೋಗ ಪಟುವಾಗಿದ್ದು, ಅಧ್ಯಯನ ಮತ್ತು ಓದು ಪಡೆದು ಸನ್ಯಾಸ ಸ್ವೀಕರಿಸಿದ್ದಾರೆ. ಇವರಿಂದ ಮಠ ಇನ್ನಷ್ಟು ಉನ್ನತಿ ಹೊಂದಲಿ ಎಂದು ಬಯಸುತ್ತೇನೆ ಎಂದು ಸಚಿವರು ಹೇಳಿದರು.

ಪಟ್ಟಾಧಿಕಾರ ಹೊಂದಿದ ಕಿರಿಯ ಶ್ರೀಗಳಿಗೆ ಮಹಾದೇವ ಶ್ರೀಗಳು ಹೊಸ ನಾಮಕರಣ ಮಾಡಿದ್ದು ಅತ್ಯಂತ ಸೂಕ್ತವಾಗಿದೆ. ಗುರುಪಾದೇಶ್ವರರು, ಶಾಂತವೀರ ಮಹಾಸ್ವಾಮಿಗಳು ಹಾಗೂ ಮಹಾದೇವ ಶಿವಾಚಾರ್ಯರ ಮೂರು ಹೆಸರುಗಳು ಇದರಲ್ಲಿದ್ದು, ಗುರು ಶಾಂತದೇವ ಮಹಾಸ್ವಾಮಿಗಳು ಎಂದು ಹೆಸರಿಸಲಾಗಿದೆ ಎಂದು ಅವರು ಹೇಳಿದರು.

ಭಕ್ತಿ, ಶ್ರದ್ಧೆಯಲ್ಲಿ ಹೆಣ್ಣುಮಕ್ಕಳು ಮುಂದೆ ಇದ್ದಾರೆ. ನಾಡಿನಲ್ಲಿ ಮಠ ಮಾನ್ಯಗಳ ಅನ್ನ, ಅಕ್ಷರಗಳ ದಾಸೋಹದಿಂದ ಬಹಳಷ್ಟು ಬದಲಾವಣೆಯಾಗಿದೆ ಎಂದು ಅವರು ಹೇಳಿದರು.

ಮಮದಾಪುರ ಶ್ರೀಗಳು ಮಾತನಾಡಿ, ಬಬಲೇಶ್ವರ ಮಠ ಪರಂಪರೆ ದೇಶವೇ ನೋಡುವ ಹಾಗಿದೆ. ಇಲ್ಲಿನ ಭಕ್ತರು ಒಗ್ಗಟ್ಟಾಗಿ ಅದಕ್ಕೆ ಶಕ್ತಿ ಹಾಕಿದ್ದಾರೆ. ಇದು ಜಿಲ್ಲೆಯಲ್ಲಿಯೇ ವಿಶೇಷ. ಡಾ. ಮಹಾದೇವ ಶಿವಾಚಾರ್ಯರ ವಜ್ರ ಮಹೋತ್ಸವ ಹಾಗೂ ಮಲ್ಲಿಕಾರ್ಜುನ ದೇವರ ಪಟ್ಟಾಧಿಕಾರ ಕಾರ್ಯಕ್ರಮ ಯಶಸ್ವಿಯಾಗಿ ದಾಖಲೆ ನಿರ್ಮಿಸಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಾ. ಮಹಾದೇವ ಶಿವಾಚಾರ್ಯರು, ಡಾ. ಪ್ರಭುಸಾರಂಗ ದೇವರು, ಅಭಿನವ ಸಂಗನಬಸವ ಶ್ರೀಗಳು, ಕನ್ನೂರಿನ ಶ್ರೀ, ಹಾವೇರಿ ಶ್ರೀಗಳು, ಸಿದ್ದಾರೂಢ ಶ್ರೀಗಳು ಉಪಸ್ಥಿತರಿದ್ದರು.

# ಗಣೇಶ ಮೂರ್ತಿಗಳ ವಿಸರ್ಜನೆಗೆ ಪಾಲಿಕೆಯಿಂದ ಅಗತ್ಯ ಸಿದ್ಧತೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಗಣೇಶೋತ್ಸವದ ಹಿನ್ನೆಲೆಯಲ್ಲಿ ನಗರದಲ್ಲಿ ಸಾರ್ವಜನಿಕವಾಗಿ ಪ್ರತಿಷ್ಠಾಪಿಸಲಾಗಿರುವ ಹಾಗೂ ಮನೆಗಳಲ್ಲಿ ಪೂಜಿಸಲಾಗುವ ಗಣೇಶ ಮೂರ್ತಿಗಳ ವಿಸರ್ಜನೆ ಸುಗಮವಾಗಿ, ಸುರಕ್ಷಿತವಾಗಿ ನಡೆಯುವಂತೆ ವಿಜಯಪುರ ಮಹಾನಗರ ಪಾಲಿಕೆಯು ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಪಾಲಿಕೆಯು ಸಾರ್ವಜನಿಕರ ಸುರಕ್ಷತೆ, ನೈರ್ಮಲ್ಯ ಹಾಗೂ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಿ ನಗರದ ವಿವಿಧೆಡೆ ಕೃತಕ ಗಣೇಶ ಮೂರ್ತಿ ವಿಸರ್ಜನಾ ಹೊಂಡಗಳು, ಮೊಬೈಲ್ ಟ್ಯಾಂಕ್‌ಗಳು ಹಾಗೂ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ.ನಗರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗಣೇಶ ಮೂರ್ತಿಗಳ ವಿಸರ್ಜನೆ ನಡೆಯುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಜೈಲ ದರ್ಗಾ ಹತ್ತಿರ 100ಥ40 ಅಡಿ ಹಾಗೂ ಕೆ-ಎಸ್‌ಆರ್‌ಟಿಸಿ ಸ್ಯಾಟ್‌ಲೈಟ್ ಬಸ್ ನಿಲ್ದಾಣದ ಹತ್ತಿರ 40ಥ40 ಅಡಿ ಅಳತೆಯ ವಿಶಾಲ ಕೃತಕ ಹೊಂಡಗಳನ್ನು ನಿರ್ಮಿಸಲಾಗಿದೆ. ಸುಮಾರು ಎರಡು ಅಡಿಗಳವರೆಗಿನ ಗಣೇಶ ಮೂರ್ತಿಗಳ ವಿಸರ್ಜನೆಗಾಗಿ ತಾಜಬಾವಡಿ ಆವರಣದಲ್ಲಿರುವ ಖಾಯಂ ಪುಷ್ಕರಣಿಯನ್ನು ಸಹ ಕಾಯ್ದಿರಿಸಲಾಗಿದೆ.

ಇದರೊಂದಿಗೆ ನಗರದ ವಿವಿಧ ವಾರ್ಡ್‌ಗಳ ವ್ಯಾಪ್ತಿಯಲ್ಲಿರುವ ಶ್ರೀನಗರ ಪಾರ್ಕ್, ಕೆ.ಸಿ. ನಗರ, ಐಟಿಐ ಕಾಲೇಜು ಹಿಂಭಾಗ, ಕಲ್ಯಾಣ ನಗರ, ಪಾರೇಕ ನಗರ, ಸ್ವಾಮಿ ವಿವೇಕಾನಂದ ಗಾರ್ಡನ್, ಗಣೇಶ ನಗರ, ಜಲನಗರ ಪಾಲಿಕೆ ಕಚೇರಿ, ರಾಮನಗರ ಬಸ್ ನಿಲ್ದಾಣ ಹಿಂಭಾಗ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆವರಣ, ಅಯ್ಯಪ್ಪ ಸ್ವಾಮಿ ಗುಡಿ ಹಾಗೂ ಶಿವನಗರ ಗಾರ್ಡನ್ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಕೃತಕ ವಿಸರ್ಜನಾ ಹೊಂಡಗಳನ್ನು ನಿರ್ಮಿಸಲಾಗಿದೆ. ಮನೆಗಳಲ್ಲಿ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿ ವಿಸರ್ಜಿಸಲು ಸಾರ್ವಜನಿಕರ ಅನುಕೂಲಕ್ಕಾಗಿ ಮಹಾನಗರ ಪಾಲಿಕೆಯಿಂದ ಸಂಚಾರಿ ಮೊಬೈಲ್ ಟ್ಯಾಂಕ್‌ಗಳ ವ್ಯವಸ್ಥೆಯನ್ನೂ ಮಾಡಲಾಗಿದೆ.

ವಿಸರ್ಜನಾ ಕೇಂದ್ರಗಳಲ್ಲಿ ರಾತ್ರಿ ವೇಳೆಯಲ್ಲಿಯೂ ಯಾವುದೇ ತೊಂದರೆಯಾಗದಂತೆ ವಿದ್ಯುತ್ ಹಾಗೂ ಬೆಳಕಿನ ವ್ಯವಸ್ಥೆ ಕಲ್ಪಿಸಲಾಗಿದೆ. ಸಾರ್ವಜನಿಕರ ಸುರಕ್ಷತೆಗಾಗಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ, ಪ್ರತ್ಯೇಕ ಪ್ರವೇಶ ಮತ್ತು ನಿರ್ಗಮನ ಮಾರ್ಗಗಳ ವ್ಯವಸ್ಥೆ ಕಲ್ಪಿಸಲಾಗಿದೆ. ವಿಸರ್ಜನಾ ಪ್ರಕ್ರಿಯೆಯ ಮೇಲ್ವಿಚಾರಣೆಗಾಗಿ ಪಾಲಿಕೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡಲು ಹೆಚ್ಚುವರಿಯಾಗಿ ಪೌರಕಾರ್ಮಿಕರ ತಂಡಗಳನ್ನು ನಿಯೋಜಿಸಲಾಗಿದೆ. ವಿಸರ್ಜನೆಯ ಸಂದರ್ಭದಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸಹ ಕ್ರಮ ಕೈಗೊಳ್ಳಲಾಗಿದೆ. ಗಣೇಶ ಮೂರ್ತಿಗಳ ವಿಸರ್ಜನೆಯನ್ನು ನೈಸರ್ಗಿಕ ಜಲಮೂಲಗಳಲ್ಲಿ ನಡೆಸುವುದರಿಂದ ಉಂಟಾಗಬಹುದಾದ ಪರಿಸರ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಾರ್ವಜನಿಕರು ಪಾಲಿಕೆ ನಿರ್ಮಿಸಿರುವ ಕೃತಕ ಹೊಂಡ ಹಾಗೂ ನಿಗದಿಪಡಿಸಿರುವ ವಿಸರ್ಜನಾ ಸ್ಥಳಗಳನ್ನೇ ಬಳಸುವಂತೆ ಮನವಿ ಮಾಡಲಾಗಿದೆ. ಪ್ಲಾಸ್ಟರ್ ಆಫ್ ಪ್ಯಾರಿಸ್ ಮೂರ್ತಿಗಳು, ಪ್ಲಾಸ್ಟಿಕ್ ಅಲಂಕಾರಿಕ ಸಾಮಗ್ರಿಗಳು ಸೇರಿದಂತೆ ಪರಿಸರಕ್ಕೆ ಹಾನಿಕಾರಕ ವಸ್ತುಗಳನ್ನು ಜಲಮೂಲಗಳಿಗೆ ಹಾಕದಂತೆ ಪಾಲಿಕೆ ಸೂಚಿಸಿದೆ.

ಪೂಜಾ ಸಾಮಗ್ರಿಗಳಾದ ಹೂವು, ಹಾರ ಸೇರಿದಂತೆ ಇತರೆ ವಸ್ತುಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ವ್ಯವಸ್ಥೆ ಮಾಡಲಾಗಿದೆ. ವಿಸರ್ಜನಾ ಸ್ಥಳಗಳಲ್ಲಿ ಸಾರ್ವಜನಿಕರು ಪಾಲಿಕೆಯ ಸಿಬ್ಬಂದಿಯೊಂದಿಗೆ ಸಹಕರಿಸಿ, ಸ್ವಚ್ಛತೆ ಹಾಗೂ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡುವಂತೆ ಮನವಿ ಮಾಡಲಾಗಿದೆ.

ಗಣೇಶ ಮೂರ್ತಿಗಳ ವಿಸರ್ಜನೆ ಶಾಂತಿಯುತವಾಗಿ ಹಾಗೂ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ನಡೆಯಲು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ನಗರದ ನಾಗರಿಕರು ಪಾಲಿಕೆಯು ಕಲ್ಪಿಸಿರುವ ಗಣೇಶ ಮೂರ್ತಿ ವಿಸರ್ಜನಾ ಸೌಲಭ್ಯಗಳನ್ನು ಬಳಸಿಕೊಂಡು ಶಾಂತಿ, ಸುವ್ಯವಸ್ಥೆ, ಸ್ವಚ್ಛತೆ ಹಾಗೂ ಪರಿಸರ ಸ್ನೇಹಿ ರೀತಿಯಲ್ಲಿ ಗಣೇಶೋತ್ಸವ ಆಚರಿಸಲು ಸಹಕರಿಸಬೇಕು ಎಂದು ಮಹಾನಗರ ಪಾಲಿಕೆಯ ಮೇಯರ್ ಅವರು ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR